ಅಪರಂಜಿ

ತಿಳಿನಗೆಯ ಕಾರಂಜಿ



ಸೆಪ್ಟೆಂಬರ್ - 2010





"ನಾನು ದೊಡ್ಡವನಾದ ಮೇಲೆ ಮೇಷ್ಟ್ರಾಗಿ
ಎಲ್ಲರಿಗೂ ಚೆನ್ನಾಗಿ ಪಾಠ ಕಲಿಸ್ತೀನಿ"

ಬಿಡಿ ಪ್ರತಿ: ರೂ. 10.00

With Best Compliments from:

SVR Agencies


NO.2, 3rd Cross Kalasipalyam,
New Extention Bangalore - 560 002.

Grams : Equipments	:	Tel : 080 - 22222301 Fax : 080 - 22224497
Distributors For	:	ASPEE Sprayers and Dusters for Agriculture and Horticulture
CONSIGNMENT	:	M/S DSM ENGINEERING AGENTS FOR PLASTICS (INDIA) PVT. LTD Thermoplastic PloysterGranules (CENKITE) Polyamise Granules (CENKALON)

ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 27
ಸಂಚಿಕೆ - 12
ಸೆಪ್ಟೆಂಬರ್ - 2010

ಸಂಪಾದಕ ಮಂಡಳಿ
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ಪಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....


ಅಪರಂಜಿ ಕಿಡಿ	ಪ್ರಕಾಶ್	2
ಕಡಲೀಚೆಯ....	ಶಿವು	3
ನಿಮ್ಮ ಆಯ್ಕೆ		6
ಕಿ ರಂ ನಾಗರಾಜ್...	ಅಬ್ದುಲ್ ರಷೀದ್	9
ನಿಮಗೆ ಹಣ ಬೇಕೆ?	ಎಚ್ಚೆಸ್ಕೆ	14
ವಿದ್ಯಮಾನಗಳು	ಕು.ಕ.	20
ತುಂತುರು	ದಂನಾ	22
ಬಾಬಮ್ಮಾ ಕೀ......	ಗುರು	23
ಫ್ಲೆಕ್ಸಿ ಬೋರ್ಡ್...	ಆನಂದ	27
ಒಂದು ಪೇಟಿನ.....	ಮದ್ದೂರ್ದ	31
ಸಂವಾದ	ಎಸ್. ರಾಜಗೋಪಾಲಾಚಾರಿ	33
ಹಾಸ್ಯದೊಂದು.....	ಬೇಲೂರು ರಾಮಮೂರ್ತಿ	35
ಹುರುಳಿ ಕಟ್ಟು..	ಎಚ್. ಗೋಪಾಲಕೃಷ್ಣ	37
ಬಂದೋಪಾಧ್ಯಾನ	ಕುಬ್ಜ	39
ಮೊಮ್ಮಗ ಮುಂದಿಟ್ಟ..	ರಾಮಿ	40

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

ಅಪರಂಜಿ ಕಿಡಿ

೦ ಪ್ರಕಾಶ್



ಕಾಮನ್ ವೆಲ್ತ್ : ಭ್ರಷ್ಟಾಚಾರಕ್ಕೆ ಮಿತಿ ಎಲ್ಲಿ? - ಪತ್ರಿಕೆ

● ಎಷ್ಟಾದರೂ ಕಾಮನ್ wealth ಅಲ್ಲವೇ ?!!

★★★

ಲ್ಯಾಟಿನ್ - ಕನ್ನಡ ನಿಘಂಟು ಬಿಡುಗಡೆ - ಸುದ್ದಿ

● ಅದನ್ನು ಓದುವುದಕ್ಕೆ ಗ್ರೀಸ್‌ನಿಂದ ಜನ ಬಾರದಿರುತ್ತಾರೆಯೇ ?!!

★★★

ಅದಿರಿನಿಂದ ಸರ್ಕಾರವೇ ಅದುರುತ್ತಿದೆಯಲ್ಲ !
ಎಂದು ಅಪರಂಜಿ ನಕ್ಕಳಂತೆ !

★★★

ಕಾಂಗ್ರೆಸ್ ದೊಂಬರಾಟ ! ಸಿ.ಎಂ. ಗೇಲಿ - ಸುದ್ದಿ

● ಅರೆ, ನಾವೂ ಅವರನ್ನು ಇದೇ ರೀತಿ ವರ್ಣಿಸಿದ್ದೀವಲ್ಲ ಅಂತ ಕಾಂಗ್ರೆಸ್ ನಾಯಕರು ಚಕಿತರಾದರಂತೆ !!

★★★

ಬಿ.ಜೆ.ಪಿ.ಯಿಂದ ವಕ್ರದೃಷ್ಟಿ ಹೋಮ - ಬಳ್ಳಾರಿ ಸುದ್ದಿ

● ಭಗವಂತ ಬೆಚ್ಚಿದನಂತೆ !!

★★★

ಮಾತಿನ ಮೇಲೆ ಹಿಡಿತವಿರಲಿ - 'ವಾಚಕರ ವಾಣಿ'ಯಲ್ಲಿ ಶ್ರೀ ವಿವೇಕ್

● ವಿವೇಕದ ಮಾತು !!

★★★

ಕಡಲೀಚೆಯ ಕುಡಿನೋಟ

- ಶಿವು

ಒಂದು ಜನತೆಯ ಬಗ್ಗೆ ತ್ವರೆಯಿಂದ ತಿಳಿಯುವ ವಿಧಾನ ಇಂಗ್ಲೆಂಡಿಗೆ ಬಂದನಂತರ ಹೊಳೆಯಿತು. ಇಲ್ಲಿನ ಜನಪ್ರಿಯ ದಿನ ಪತ್ರಿಕೆ – ದ ಗಾರ್ಡಿಯನ್ ಹಾಗೂ ನಮ್ಮ ವಿಜಯ ಕರ್ನಾಟಕ ಪತ್ರಿಕೆಗಳ ಇಲೆಕ್ಟ್ರಾನಿಕ್ ವರ್ಷನ್‌ಗಳ ಮೊದಲ ಎರಡು ಪುಟಗಳ ಮೇಲೆ ಇಂದು ಬೆಳಗ್ಗೆ ಕಣ್ಣಾಡಿಸಿದೆ. ನಮ್ಮ ಕನ್ನಡ ಪತ್ರಿಕೆಯಲ್ಲಿ ನೂರಕ್ಕೆ ನೂರರಷ್ಟು ರಾಜಕೀಯ ಸುದ್ದಿ. ಗಣಿಧಣಿಗಳ ತನಿಖೆ ಬಗ್ಗೆ ಸಂಪತ್ತಿನಲ್ಲಿ ದೇವೇಗೌಡರ ಆರ್ಭಟ, ಮದಾನಿ ಬಂಧನ, ಬಚ್ಚೇಗೌಡರ ಹೇಳಿಕೆ, ಬಿಬಿಎಂಪಿಯ ಹಲವಾರು ಹಗರಣಗಳು ಇವು ಇಂದಿನ ವಿಜಯ ಕರ್ನಾಟಕದ ಮೊದಲಿನ ಎರಡು ಪುಟಗಳನ್ನು ತುಂಬಿದ್ದ ಸುದ್ದಿಗಳು. ಗಾರ್ಡಿಯನ್ ಪತ್ರಿಕೆಯಲ್ಲಿ ಇದೇ ದಿನ ಮೊದಲಿನ ಎರಡು ಪುಟಗಳಲ್ಲಿ ನಾನು ಕಂಡದ್ದು ಒಂದೇ ಒಂದು ರಾಜಕೀಯ ಸುದ್ದಿ. ಟೋರಿ ಮುಂದಾಳತ್ವದ ಕೊಯಲಿಷನ್ ಸರ್ಕಾರ ಒಪಿನಿಯನ್ ಪೋಲ್‌ಗಳಲ್ಲಿ ಸಾಧಿಸಿರುವ ಮುನ್ನಡೆ. ಮಿಕ್ಕ ಸುದ್ದಿಗಳೆಂದರೆ ಶಾಪಿಂಗ್ ಸೆಂಟರ್‌ಗಳಲ್ಲಿ ತ್ವರಿತ ನ್ಯಾಯಾಲಯಗಳ ಸ್ಥಾಪನೆ, ಮಕ್ಕಳು ಇರುವ ಕಾರುಗಳಲ್ಲಿ ಧೂಮಪಾನ ನಿಷೇಧ, ಹೆಪಟೈಟಿಸ್ ತಪಾಸಣೆ ಉಚಿತವಾಗಿರಬೇಕೆಂಬ ಆಹವಾಲು ಮತ್ತು ವಿಜ್ಞಾನದ ಸುದ್ದಿಯಲ್ಲಿ, ಒಂದು ಜಾತಿಯ ಫಂಗಸ್ (ಬೂಷ್ಟು) ಇರುವೆಗಳ ಮಿದುಳನ್ನು ಆಕ್ರಮಿಸಿ ಅವುಗಳು ತಮ್ಮ ಪ್ರಾಣವನ್ನೇ ತೆತ್ತು ಫಂಗಸ್‌ನ ಪ್ರಸಾರವನ್ನು ಹೆಚ್ಚಿಸುವಂತೆ ಅವುಗಳ ಮಿದುಳನ್ನು ಪ್ರಚೋದಿಸುವ ವಿಚಿತ್ರದ ಬಗ್ಗೆ ಒಂದು ವಿವರವಾದ ಲೇಖನ. ಇದನ್ನೆಲ್ಲಾ ಓದಿದಾಗ, ದಿನ ಬೆಳಗಾದರೆ ರಾಜಕೀಯವನ್ನೇ ಉಸಿರಾಡುತ್ತಾ, ವಿವಿಧ ವಿಷಯಗಳ ಬಗ್ಗೆ ಕುತೂಹಲ ಬೆಳೆಸಿಕೊಂಡು ಸಮಾಜಮುಖಿಗಳಾಗುವ ಅವಕಾಶದಿಂದ ನಾವು ವಿನಾಕಾರಣ ವಂಚಿತರಾಗುತ್ತಿದ್ದೇವೇನೋ ಅನ್ನಿಸಿತು.

ಹದಿನೇಳನೆ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದ ಜಾನ್ ಹ್ಯಾರಿಸನ್ ವೃತ್ತಿಯಲ್ಲಿ ಒಬ್ಬ ಬಡಗಿ. ಚಿಕ್ಕಂದಿನಿಂದ ಇವನಿಗೆ ಗಡಿಯಾರಗಳನ್ನು ತಯಾರಿಸುವುದರಲ್ಲಿ ಬಹು ಆಸಕ್ತಿ. ಆ ದಿನಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ ಹಾಯಿಪಟಗಳ ಹಡಗುಗಳು ಸಮುದ್ರಗಳ ಮೇಲೆ ಚಲಿಸುವಾಗ ಕರಾರುವಾಕ್ಕಾಗಿ ಸಮಯ ತಿಳಿಯುವ ಗಡಿಯಾರಗಳಿಲ್ಲದೇ ಪೇಚಾಡುತ್ತಿದ್ದಾಗ, ತನ್ನ ಇಡೀ ಜೀವಮಾನವನ್ನು ಇಂತಹ ಒಂದು ಗಡಿಯಾರದ ಅನ್ವೇಷಣೆಗೆ ಮೀಸಲಿಟ್ಟು ಕೊನೆಗೂ ಯಶಸ್ವಿಯಾದ ಪ್ರತಿಭಾವಂತ ಹ್ಯಾರಿಸನ್. ಯಾಕೆ ಹೇಳುಕ್ಕೆ ಬಂದೆ ಅಂದರೆ ಮೊನ್ನೆ ಲಂಡನ್ನಿನ ಬಳಿ ಇರುವ ಗ್ರೀನಿಚ್ ಹಳ್ಳಿಗೆ ಹೋಗಿ, ಅಲ್ಲಿರುವ ನ್ಯಾಷನಲ್ ಮ್ಯಾರಿಟೈಮ್ ಮ್ಯೂಸಿಯಮ್ ಹಾಗೂ ರಾಯಲ್ ಅಬ್ಸರ್ವೇಟರಿಗಳನ್ನು ನೋಡುವ ಅವಕಾಶ ಸಿಕ್ಕಿತ್ತು. ಗ್ರೀನಿಚ್ ಮೀನ್ ಟೈಮ್ ಅನ್ನು

ನಿರ್ಧರಿಸುವ ಅಂತರ ರಾಷ್ಟ್ರೀಯ ಡೇಟ್ ಲೈನ್ ಅನ್ನು ಈ ರಾಯಲ್ ಅಬ್ಸರ್ವೇಟರಿಯಲ್ಲಿ ನೋಡಬಹುದು. ಈ ರೇಖೆಯ ಎರಡೂ ಬದಿಗಳಲ್ಲಿ ಎರಡು ಕಾಲುಗಳನ್ನು ಇರಿಸಿ, ತಾವು ಒಂದೇ ಕ್ಷಣದಲ್ಲಿ ಎರಡು ಕಾಲಮಾನಗಳಲ್ಲಿ ಇರುತ್ತಿದ್ದೇವೆಂದು ಭ್ರಮಿಸಿ ಬೀಗುತ್ತಾ ಫೋಟೋ ತೆಗೆಸಿಕೊಳ್ಳುತ್ತಿರುವ ಅನೇಕ ಪ್ರವಾಸಿಗಳನ್ನು ಇಲ್ಲಿ ನೋಡಿದ್ದಾಯಿತು. ಈ ಅಬ್ಸರ್ವೇಟರಿಯ ಸಂಗ್ರಹಾಲಯದಲ್ಲಿ ಹ್ಯಾರಿಸನ್ ನಿರ್ಮಿಸಿದ ಕ್ರೋನೋಮೀಟರ್‌ಗಳ ನಾಲ್ಕೂ ಮಾದರಿಗಳನ್ನು ಇರಿಸಿದ್ದಾರೆ. ಆಶ್ಚರ್ಯವೆಂದರೆ ಮುನ್ನೂರು ವರ್ಷಗಳ ನಂತರವೂ ಈ ಗಡಿಯಾರಗಳು ಅದೇ ನಿಖರತೆಯಿಂದ ಈಗಲೂ ಕಾಲವನ್ನು ಸೂಚಿಸುತ್ತಿವೆ.

ನ್ಯಾಷನಲ್ ಮ್ಯಾರಿಟೈಮ್ ಮ್ಯೂಸಿಯಂನಲ್ಲಿ ಇಂಗ್ಲೆಂಡಿನ ಹಡಗು ತಯಾರಿಕೆ ಹಾಗೂ ಸಾಗರವನ್ನು ಜಯಿಸಿದ ಇತಿಹಾಸವನ್ನು ಬಹು ವಿವರವಾಗಿ ತಿಳಿಸುವ ನೂರಾರು ಉಪಕರಣಗಳು ಪ್ರದರ್ಶನಕ್ಕೆ ಇವೆ. ನಕ್ಷತ್ರಗಳನ್ನು ವೀಕ್ಷಿಸಿ ತಾವು ಚಲಿಸುತ್ತಿರುವ ದಿಕ್ಕನ್ನು ತಿಳಿಯುವ ಸೆಕ್ಸ್‌ಟೆಂಟ್‌ಗಳು, ಕ್ಲಿನೋಮೀಟರುಗಳು, ಟೆಲಿಸ್ಕೋಪುಗಳ ಹಂತ ಹಂತವಾದ ವಿಕಾಸ, ಇವುಗಳೆಲ್ಲಾ ತಂಡ ತಂಡವಾಗಿ ಅಲ್ಲಿಗೆ ಬರುತ್ತಿದ್ದ ಶಾಲಾ ಮಕ್ಕಳಿಗೆ ಅತ್ಯಂತ ಸ್ಫೂರ್ತಿದಾಯಕವಾಗಿದ್ದದ್ದು ಮಕ್ಕಳ ಮುಖಗಳಲ್ಲಿನ ಉತ್ಸಾಹದಿಂದಲೇ ಕಾಣಬಹುದಾಗಿತ್ತು. ನಾಲ್ಕನೆಯ ಶತಮಾನದಷ್ಟು ಹಿಂದೆಯೇ ತಮಿಳುನಾಡಿನ ಕೋರಮಂಡಲದ ಬಂದರುಗಳಿಂದ ಅತಿ ದೊಡ್ಡ ಹಡಗುಗಳನ್ನು ವ್ಯಾಪಾರ ಹಾಗೂ ಯುದ್ಧಗಳಿಗೆ ಓಡಾಡಿಸುತ್ತಿದ್ದ ಪಲ್ಲವರಿಂದ ಮೊದಲುಗೊಂಡು ಕಾಂಬೋಡಿಯಾದವರೆಗೂ ಪ್ರಭುತ್ವ ಸ್ಥಾಪಿಸಿದ್ದ ಹಿಂದೂ ಸಾರ್ವಭೌಮರ ಸಾಧನೆಗಳನ್ನು ನಮ್ಮ ಯುವ ಜನತೆಗೆ ಹೆಮ್ಮೆಯಿಂದ ತಿಳಿಸುವ ಪ್ರದರ್ಶನಾಲಯಗಳು ನಮ್ಮ ನಾಡಿನಲ್ಲಿದ್ದರೆ ಅವು ಇನ್ನೂ ನನ್ನ ಗಮನಕ್ಕೆ ಬಂದಿಲ್ಲ.

ನಿನ್ನೆ ಬೆಳಗ್ಗೆ ನಮ್ಮ ಪಕ್ಕದ ಮನೆಯ ನಿವಾಸಿ ಬಾಬ್‌ನೊಂದಿಗೆ ಗಾಲ್ಫ್ ಆಡಲು ಹೋಗಿದ್ದೆ. ವಾರದ ಮಧ್ಯದ ದಿನವಾದ್ದರಿಂದ ಕೋರ್ಸ್ ಖಾಲಿ ಖಾಲಿಯಾಗಿತ್ತು. ಅದೂ ಇದೂ ಮಾತನಾಡುತ್ತಿದ್ದಾಗ ಬಾಬ್ ಅಮೆರಿಕನ್ನರ ನಗೆ ಪ್ರಜ್ಞೆ ಕುರಿತು, ಅಮೆರಿಕನ್ನರಿಗೆ "ಐರನಿ ಅಂದರೆ ಏನೂ ತಿಳಿಯದು." ಅಂತ ಒಂದು ಹೇಳಿಕೆ ನೀಡಿದ. "ಯಾಕೆ ಹಾಗಂತೀ?" ಅಂತ ಪ್ರಶ್ನಿಸಿದೆ.

"ಒಬ್ಬ ಇಂಗ್ಲೀಷ್‌ನವ ಮತ್ತು ಒಬ್ಬ ಅಮೆರಿಕನ್ ಮಾತನಾಡ್ತಾ ಇರ್ತಾರೆ ಇಂಗ್ಲೀಷ್‌ನವ ಕಳೆದ ವಾರ ನಾನು ನನ್ನ ತಾತನ ಫ್ಯೂನೆರಲ್‌ಗೆ ಹೋಗಬೇಕಾಗಿತ್ತು" ಅಂತಾನೆ. ಅದಕ್ಕೆ ಅಮೆರಿಕನ್ "ಓಹೋ, ನನ್ನ ಸಂತಾಪಗಳು" ಅಂತ ಹೇಳ್ತಾನೆ. ಅದಕ್ಕೆ ಇವನು "ಅಂತಹ ಸಂತಾಪ ವ್ಯಕ್ತಪಡಿಸೋ ಅಗತ್ಯ ಇಲ್ಲ, ಅದೇ ಮೊದಲ ಬಾರಿ ನನ್ನ ತಾತ ಯಾರಿಗಾದರೂ ಆತಿಥ್ಯ ನೀಡಿದ್ದು" ಅಂತ ನಸುನಗುತ್ತಾ ಹೇಳುತ್ತಾನೆ. ಅದಕ್ಕೆ ನಮ್ಮ ಅಮೆರಿಕನ್ "ಹೌದೇ" ಅಂತ ಉದ್ಗರಿಸಿ ಸುಮ್ಮನಾಗುತ್ತಾನೆ. ನಮ್ಮ ಇಂಗ್ಲಿಷ್ ಸಂಸ್ಕೃತಿಯಲ್ಲಿ ಫ್ಯೂನೆರಲ್ಲಿನಂತಹ ವಿಷಾದದ ಸಂಗತಿ ಬಗ್ಗೆ ಮಾತನಾಡುವಾಗ ದುಃಖವನ್ನು ಹಗುರಗೊಳಿಸಲು ತಾತನ

ಜುಗುಪ್ಸನದಂತಹ ಯಾವುದಾದರೊಂದು ವಿಷಯದ ಮೇಲೆ ಕಾಮೆಂಟ್ ಮಾಡುವುದು, ಅದನ್ನ ನೋಡಿ ನಗುವುದು ಸರ್ವೇಸಾಮಾನ್ಯ. ಅಮೆರಿಕನ್ನರಿಗೆ ಇದು ವಿಚಿತ್ರ ಅನ್ನಿಸುತ್ತೆ. ನಾನೊಮ್ಮೆ ಅಮೆರಿಕೆಗೆ ಹೋಗಿದ್ದಾಗ ನನ್ನ ಗೆಳೆಯನೊಬ್ಬ ನನ್ನನ್ನು ತನ್ನ ಮನೆಗೆ ಊಟಕ್ಕೆ ಕರೆದ. ಕರೆಯುವಾಗ ''ಖಂಡಿತ ಊಟಕ್ಕೆ ಬರಲೇಬೇಕು. ತಪ್ಪಿಸಿಕೊಳ್ಳಬಾರದು. ತಪ್ಪಿಸಿಕೊಂಡರೆ ಷೂಟ್ ಮಾಡಿಬಿಡುತ್ತೇನೆ'' ಅಂತ ಹೇಳಿದ. ಅಲ್ಲೀವರೆಗೆ ಅವನ ಹಾಸ್ಯಪ್ರಜ್ಞೆ ನಮ್ಮ ರೀತಿಯದ್ದೇ ಅಂತ ಅನ್ನಿಸಿತ್ತು. ಆದರೆ ಆತ ಮುಂದುವರಿಸಿ, ''ತಮಾಷೆಗೆ ಹೇಳಿದೆ'' ಅಂತ ಮುಕ್ತಾಯಗೊಳಿಸಿದ. ಆ ಒಂದು ಮಾತಿನಿಂದ ಇದ್ದ ತಮಾಷೆಯೆಲ್ಲಾ ಮಾಯವಾಯಿತು. ಇದೇ ನೋಡು ನಮ್ಮೆರಡು ದೇಶಗಳ ನಡುವಣ ಕಂದರ ಅಂತ ಹೇಳಿದ ಬಾಬ್.

ನಮ್ಮ ಕನ್ನಡಿಗರ ನಗೆಪ್ರಜ್ಞೆ ಇತರ ದೇಶಗಳ ನಗುಮನೋಭಾವಕ್ಕೆ ಹೇಗೆ ಹೋಲುತ್ತೋ ಪರಿಶೀಲಿಸಬೇಕಾದ ಸಂಗತಿ ಅನ್ನಿಸುತ್ತೆ ನನಗೆ.

❋

ಬಣ್ಣದ ನೋಟ

ಒಬ್ಬ ಶ್ರೀಮಂತನಿಗೆ ಕಣ್ಣಿನ ತೊಂದರೆಯಿಂದಾಗಿ ದೃಷ್ಟಿ ಮಂದವಾಯಿತು. ಅದಕ್ಕೆ ಬೇಕಾದಷ್ಟು ಔಷಧಗಳನ್ನು ಮಾಡಿದ ಆದರೂ ಏನೂ ಫಲಕಾರಿಯಾಗಲಿಲ್ಲ. ಒಮ್ಮೆ ಒಬ್ಬ ಭೌದ್ಧ ಭಿಕ್ಷು ಅವನ ಮನೆಗೆ ಬಂದವರು ಅವನ ಕಣ್ಣಿನ ತೊಂದರೆಗೆ ಅವನು ಇನ್ನು ಮುಂದೆ ಬರೀ ಹಸಿರನ್ನೇ ನೋಡಬೇಕು. ಹೀಗೆ ಮಾಡಿದರೆ ಸ್ವಲ್ಪ ದಿನದಲ್ಲೇ ಅವನ ದೃಷ್ಟಿ ದೋಷ ಸರಿಹೋಗಬಹುದು ಅಂತ ಸಲಹೆ ಕೊಟ್ಟರು. ಕೂಡಲೇ ಶ್ರೀಮಂತ ಆಳುಗಳನ್ನು ಕಳಿಸಿ ಟನ್ ಗಟ್ಟಲೆ ಹಸಿರು ಬಣ್ಣವನ್ನು ತರಿಸಿ ಎಲ್ಲ ಕಡೆ ಹಸಿರು ಬಣ್ಣವನ್ನೇ ಬಳಿಸಿದ. ಮನೆಯಲ್ಲಿನ ಎಲ್ಲ ಪರಿಕರಗಳೂ, ವಾಹನಗಳೂ, ಜೊತೆಗೆ ಎಲ್ಲರ ಬಟ್ಟೆಯೂ ಹಸಿರು ಬಣ್ಣದ್ದಾಯಿತು. ಅವನು ನೋಡೋ ಕಡೆ ಹಸಿರಿರುವಂತೆ ನೋಡಿಕೊಂಡರು. ಹೀಗಿರುವಾಗ ಸ್ವಲ್ಪ ದಿನದಲ್ಲೇ ಮತ್ತೆ ಬೌದ್ಧ ಭಿಕ್ಷು ಆ ಕಡೆ ಬಂದವರು ಶ್ರೀಮಂತ ಹೇಗಿರುವನೋ ಅಂತ ನೋಡೋಣ ಅಂತ ಅವನ ಮನೆಗೆ ಬಂದರು. ಕೂಡಲೇ ಶ್ರೀಮಂತನ ಆಳುಗಳು ಆ ಬೌದ್ಧ ಭಿಕ್ಷುವಿನ ಮೇಲೆ ಒಂದು ಡಬ್ಬ ಹಸಿರು ಬಣ್ಣವನ್ನು ಸುರಿದರು. ಏಕೆಂದರೆ ಭಿಕ್ಷು ಕೆಂಪು ಬಣ್ಣದ ಅಂಗಿ ತೊಟ್ಟಿದ್ದರು. ಆಗ ಅಲ್ಲಿನ ಪರಿಸ್ಥಿತಿ ಅರ್ಥಮಾಡಿಕೊಂಡು ಭಿಕ್ಷು ಶ್ರೀಮಂತನಿಗೆ ಹೇಳಿದರು. ನೀನು ಇಷ್ಟೆಲ್ಲ ಖರ್ಚು ಮಾಡುವ ಬದಲಿಗೆ ಒಂದು ಹಸಿರು ಕನ್ನಡಕವನ್ನು ಹಾಕಿಕೊಂಡಿದ್ದರೆ ನೀನು ನೋಡುವ ವಸ್ತುಗಳೆಲ್ಲವೂ ಹಸಿರು ಬಣ್ಣದ್ದಾಗಿಯೇ ಕಾಣುತ್ತಿತ್ತು. ಒಂದು ವಿಚಾರ ಅರ್ಥ ಮಾಡಿಕೊ - ಏನೆಂದರೆ ನಾವು ಲೋಕವನ್ನು, ಅದರ ಬಣ್ಣವನ್ನೂ ಬದಲಿಸಲು ಸಾಧ್ಯವಿಲ್ಲ. ಅದು ಹೇಗಿದೆಯೋ ಹಾಗೆ ನೋಡಿ ಆನಂದಿಸಲು ನಮ್ಮ ದೃಷ್ಟಿಕೋನವನ್ನೇ ಬದಲಿಸಿಕೊಳ್ಳಬೇಕು.

(ಇಂಟರ್‌ನೆಟ್ಟಿನಿಂದ ಇಳಿಸಿದವರು – ಸುಕೇಶವ)

ನಿಮ್ಮ ಆಯ್ಕೆ

ಚಪಲ ಚನ್ನಿಗರಾಯರಿಂದ!

'ನಿಮ್ಮ ಆಯ್ಕೆ' ಸ್ಪರ್ಧೆಯಲ್ಲಿ ಭಾಗವಹಿಸಿರುವ ಅಪರಂಜಿಯ ಚಪಲ ಚನ್ನಿಗರಾಯ ಓದುಗರು ತಮ್ಮ ಅನಿವಾರ್ಯ ಐಟಂ ಬಗ್ಗೆ ಬರೆದು ಕಳಿಸಿದ್ದಾರೆ. ರುಚಿ ನೋಡಲಾಗದಿದ್ದರೂ ಓದಿಯೇ ಆನಂದಿಸಿ!

ಬಲು ರುಚಿಯ 'ವಿನ್ನಿ'

- ವಿ. ಪ್ರಾಣೇಶ್‌ರಾವ್

'ರೀ ಇವತ್ತು ಟಿಫಿನ್‌ಗೆ ವಿನ್ನಿ ಮಾಡ್ಲಾ?' ನನ್ನವಳು ಕೇಳುತ್ತಾಳೆ.

'ವಿನ್ನಿನಾ?' ಮಾಡು. ಭಾಳ ಛೇಷ್ಠರ್ತದೆ. ನಂಗೂ ಯಾಕೊ ಬಾಯಿ ರುಚಿಕೆಟ್ಟಂಗಾಗ್ಯದೆ. ಬಾಡಿಸ್ಕೆಳ್ಳಕ್ಕೆ ಹಾಗೇ ಸ್ವಲ್ಪ ಸಂಡಿಗೆ, ಹಪ್ಪಳ, ಮೆಣಸಿನ್ಕಾಯಿ ಇದ್ರೆ ಕರಿದುಬಿಡು. ಮನ್ಯಾಗೆ ತುಪ್ಪ ಅದೇನು....? ಕೇಳುತ್ತೇನೆ.

'ಎಲ್ಲಾ ಅದೆ. ನೀವು ಸ್ನಾನ ಮಾಡ್ಕೊಂಬರೋದೇ ತಡ. ಎಲ್ಲಾರು ಕೂತ್ಕಂಡು ಒಟ್ಟಿಗೆ ತಿಂಬಣ....' ಅಂತಾಳೆ.

ಹೌದು. ಈ 'ವಿನ್ನಿ' ಅಂದ್ರೆ ಏನು? ಹೆಸರುಬೇಳೆ, ಅವಲಕ್ಕಿ ಹಾಗೂ ಸಾಕಷ್ಟು ತರಕಾರಿ ಹಾಕಿ ಮಾಡೊ ದಿಢೀರ್ ಬಿಸಿಬೇಳೆ ಭಾತ್. ಅಕ್ಕಿ ಹಾಕಿ ಮಾಡದೇ ಇರೋದರಿಂದ ಇದು ಅನ್ನ ಅಂತ ಅನ್ನಿಸಿಕೊಳ್ಳದೆ ತಿಂಡಿಯ ಐಟಂ ಆಗಿರ್ತದೆ.

ಬಿಡುವಿನ ಭಾನುವಾರವಾಗಿರಬೇಕು. ಹೊರಗಡೆ ಶ್ರಾವಣದ ತುಂತುರು ಹನಿಯಾಗುತ್ತಿರಬೇಕು. ಒಳಗಡೆ ಇನಿದನಿಯಲ್ಲಿ ಹಳೆಯ ಹಾಡೊಂದು ಕೇಳಿಸುತ್ತಿರಲು ಹಬೆಯಾಡುತ್ತ ಇಂಗಿನ ಪರಿಮಳ ಸೂಸುವ ಬಿಸಿಬೇಳೆಭಾತು ಕರಗುವ ತುಪ್ಪದ ಜೊತೆಗೆ ಹಾಗೇ ಒಳಗಿಳಿಯುತ್ತಿರಬೇಕು. ಮೇಲೊಂದಷ್ಟು ಸ್ಟ್ರಾಂಗ್ ಕಾಫಿ. ಇಂಥ ಸಾಂಗತ್ಯವನ್ನು ಕಂಡೇ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಿರಬೇಕು ಆ ಸರ್ವಜ್ಞ.

ಬದುಕಲು ತಿನ್ನಿ ತಿನ್ನಲು ಬದುಕಬೇಡಿ ಅಂತ ತಿಳಿದೋರು ಹೇಳಿದ್ದರೂ ನನಗಂತೂ ವಿನ್ನಿಯಲ್ಲಿ ಒಂದು ಆಪ್ತತೆ ಇದೆ. ನನ್ನ ಮಗಳು ವಿನುತಾ ಶಾಲೆಗೆ ಹೋಗುವ ದಿನಗಳಲ್ಲಿ ಅವಳ ಅಮ್ಮ ಅವಳಿಗಾಗಿ ಮಾಡಿಕೊಡುತ್ತಿದ್ದ ಈ ತಿನಿಸು ನಮಗೆಲ್ಲ ಬಲು ರುಚಿಯಾದ ತಿನಿಸಾಗಿದೆ. ಅದಕ್ಕೇ ಅವಳ ಹೆಸರನ್ನೇ ಅದಕ್ಕಿರಿಸಿ 'ವಿನ್ನಿ' ಅಂತ ಕರೆಯುತ್ತೇವೆ. ತಿನ್ನುತ್ತೇವೆ. ಆಸ್ವಾದಿಸುತ್ತೇವೆ. ಸುಖಿಸುತ್ತೇವೆ.

✵

ನಿಮ್ಮ ಆಯ್ಕೆ

ಆಪತ್ಬಾಂಧವ ಉಪ್ಪಿಟ್ಟು

- ಶ್ರೀನಿವಾಸ ಕುಂಡಂತಾಯ

ಶ್ರೀ ವೆಂಕಟೇಶ್ವರ ಸುಪ್ರಭಾತ "ಉತ್ತಿಷ್ಠೋ ಉತ್ತಿಷ್ಠ ಗೋವಿಂದ" ಎಂದು ಆರಂಭವಾದರೆ ನನ್ನ ಪ್ರಾಣಪ್ರಿಯ ದೇವರು ಉಪ್ಪಿಟ್ಟಿಗೆ "ಉಪ್ಪಿಟ್ಟೋ ಉಪ್ಪಿಟ್ಟು ಗೋವಿಂದ, ಉಪ್ಪಿಟ್ಟು ಗರುಡ ಧ್ವಜ, ಉಪ್ಪಿಟ್ಟು ಕಮಲಾಕಾಂತ," ಎಂದು ಸುಪ್ರಭಾತ ಹಾಡುತ್ತೇನೆ.

ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್‌ರನ್ನು ನಿಮ್ಮ ವ್ಯಂಗ್ಯ ಚಿತ್ರಗಳಲ್ಲಿ ಕಾಗೆಯನ್ನು ಯಾಕೆ ಬರೆಯುತ್ತೀರಿ ಅಂತ ಯಾರೋ ಕೇಳಿದ್ದಕ್ಕೆ "ಕಾಗೆ ಎಲ್ಲರಿಂದಲೂ ತಿರಸ್ಕರಿಸಲ್ಪಡುವ ಪಕ್ಷಿ, ತುಳಿತಕ್ಕೊಳಗಾದ ಯಾವುದೇ ಜೀವರಾಶಿಗೂ ನಾನು ಗೌರವ, ಪ್ರೋತ್ಸಾಹ ಕೊಡುತ್ತೇನೆ" ಅಂದಿದ್ದರು. ಅದೇ ರೀತಿ ಎಲ್ಲರಿಂದಲೂ ತಿರಸ್ಕರಿಸಲ್ಪಡುವ ಉಪ್ಪಿಟ್ಟಿಗೆ ನನ್ನ ಬೆಂಬಲ. ಹೆಂಡತಿ ತೌರಿಗೆ ಹೋದಾಗ ಸುಲಭದ ಅಡುಗೆ ನನ್ನ ಮಟ್ಟಿಗೆ ಉಪ್ಪಿಟ್ಟೇ. ಮಗಳ ಮದುವೆ ನಿಶ್ಚಿತಾರ್ಥದಲ್ಲಿ ಅನಿರೀಕ್ಷಿತವಾಗಿ ಹೆಚ್ಚು ಜನ ಬಂದಾಗ ತಕ್ಷಣಕ್ಕೆ ನನ್ನ ಮಾನ ಕಾಪಾಡಿದ್ದು ಈ ಉಪ್ಪಿಟ್ಟೇ. ಉಪ್ಪಿಟ್ಟನ್ನು ಹಳಿದರೂ, ತಿರಸ್ಕರಿಸಿದರೂ ಸಮಯಕ್ಕೆ ಉಪಕಾರಕ್ಕೆ ಒದಗುವುದು ಉಪ್ಪಿಟ್ಟೇ. ಹೆಚ್ಚು ಗತ್ತುಗಾರಿಕೆ ಇಲ್ಲದೆ ಸರಳವಾದ ರುಚಿಯಾದ ಯಾರಿಗೂ ಸುಲಭಕ್ಕೆ ಒಲಿದು ಬಂದು ಹೊಟ್ಟೆ ತುಂಬಿಸಿ ಮನವರಳಿಸುವ ಉಪ್ಪಿಟ್ಟೇ ನನ್ನ ಆಯ್ಕೆ. ತಿನಿಸುಗಳು ಮತ ಯಾಚಿಸಿದರೆ ಶುದ್ಧ ಸರಳ ಪ್ರಾಮಾಣಿಕ ಮಾನರಕ್ಷಕ ಪ್ರಾಣರಕ್ಷಕ ಉಪ್ಪಿಟ್ಟಿಗೇ ನನ್ನ ಓಟು.

ಮಡಿಯ ಉಪ್ಪಿಟ್ಟು ಎಂಬ ಸಂಜೀವಿನಿ

- ಜಿ.ಎಸ್. ಸತ್ಯಮೂರ್ತಿ

ಹೋಟೆಲ್ ಚಾಪಲ
ಇಂದಿನ ವಿಶೇಷ
ಏನ್ನಿ
ಮಡಿ ಉಪ್ಪಿಟ್ಟು
ಆ. ಉಪ್ಪಿಟ್ಟು

ಜಿಹ್ವಾಚಾಪಲ್ಯಕ್ಕೆ ನಮ್ಮನ್ನು ಮತ್ತು ನಮ್ಮ ಜೀವನವನ್ನು ಮಾರಿಕೊಂಡವರು ನಾವು. ಎಪ್ಪತ್ತರ ಅಂಚಿನಲ್ಲಿರುವ ನನಗೆ ಸಕ್ಕರೆ ಮತ್ತು ರಕ್ತದ ಒತ್ತಡ ಆತ್ಮೀಯರಾಗಿ ನನ್ನ ದೇಹದ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದಾರೆ. ಜೀವನದುದ್ದಕ್ಕೂ ನನ್ನ ಪ್ರೀತಿಯ ಉದ್ದಿನವಡೆ ಸಾಂಬಾರ್‌ನ್ನು ತಿನ್ನುತ್ತಾ ಇದುವರೆಗೆ ಯಶಸ್ವಿಯಾಗಿ ಆನಂದ ಪರವಶತೆಯನ್ನು ಹೊಂದಿರುವ ಪ್ರಾಮಾಣಿಕ ವ್ಯಕ್ತಿತ್ವ ನನ್ನದು.

ಆಗತಾನೆ ಕರಿದ ಗರಿಮುರಿ ವಡೆಯನ್ನು ಸಾಂಬಾರಿನೊಂದಿಗೆ ಸೇರಿಸಿ ತಿನ್ನುವುದೆಂದರೆ ನನಗೆ ಪಂಚಪ್ರಾಣ. ಇದೇ ನನ್ನ ಸುಖೀ ಜೀವನದ ಸೋಪಾನ. ಈ ಐಟಂನ್ನು ಈಗಲೂ


ಹೋಟೆಲ್‌ಗಳಲ್ಲಿ ಮತ್ತು ತಿಥಿಯ ಸಂದರ್ಭದಲ್ಲಿ ತಿಂದು ನಂತರ ದೈಹಿಕ ತೊಂದರೆಯನ್ನು ಅನುಭವಿಸುವುದು ದಾರುಣತೆಯ ಪರಮಾವಧಿ. 'ಗೋಕುಲ ನಿರ್ಗಮನ'ದಲ್ಲಿ ಶ್ರೀಕೃಷ್ಣ ತನ್ನ ಕೊಳಲು ಮತ್ತು ನವಿಲುಗರಿಯನ್ನು ಬೃಂದಾವನ ದಲ್ಲಿಯೇ ತೊರೆದಂತೆ ನನ್ನ ಮೆಚ್ಚಿನ, ಅಲ್ಲ ನೆಚ್ಚಿನ, ವಡೆ ಸಾಂಬಾರಿಗೆ ತಿಲಾಂಜಲಿ ನೀಡಬೇಕಾದ ಅನಿವಾರ್ಯತೆ ನನ್ನ ಜೀವನದಲ್ಲಿ ಎದುರಿಸಲಾಗದಂತಹ ಅತಿ ಹಿರಿಯ ಹೃದಾಯಾಘಾತ. ಇಂತಹ ಪ್ರೀತಿಯ ಈ ತಿಂಡಿ ನನ್ನ ಆಯ್ಕೆಯಾದರೂ ಮುಂದೆ......

ಶಾನುಭೋಗರ ವಗ್ಗರಣೆಯಂತೆ ನೀರನ್ನೂ ಕುದಿಸಿ, ಬರಿ ಸೌಟನ್ನು ಕಾಯಿಸಿ ಬಿಸಿಯ ನೀರಿನಲ್ಲಿ ಅದ್ದಿ ತುಸು ಸೈಂದ್ರವಲವಣ ಮತ್ತು ಸಕ್ಕರೆ ಸೇರಿಸಿ ಆಕಡೆ ಸಜ್ಜಿಗೆಯೂ ಅಲ್ಲ ಈ ಕಡೆ ಘಮ ಘಮಿಸುವ ಉಪ್ಪಿಟ್ಟು ಆಗಿರದೆ ಜೀವನದ ಉಸಿರಾಟದ ಚಲನೆಗೆ ಮಾಡಿದ ಮಡಿ ಉಪ್ಪಿಟ್ಟು ನನಗೀಗ ಹನುಮಂತ ದೇವರ ಸಂಜೀವಿನಿ.

ಇದೀಗ ಮಡಿಯ ಉಪ್ಪಿಟ್ಟಿಗೆ ಶರಣಾಗಿದ್ದು ಅದೇ ಪಾಲಿಗೆ ಬಂದದ್ದೇ ಪಂಚಾಮೃತವಾಗಿದೆ. ಆದರೆ ನನ್ನ ಅಚ್ಚು ಮೆಚ್ಚಿನ ಉದ್ದಿನ ವಡೆ ಸಾಂಬರ್ ತಿನ್ನಲಾಗದ ಈ ಸ್ಥಿತಿಯಲ್ಲಿಯೂ ದೇಹದಿಂದ ಅದು ದೂರವೆನಿಸಿದರೂ ಮನದಾಳದಲ್ಲಿ ಹುದುಗಿ ಆಗಾಗ್ಗೆ ನೆನಪಾಗಿ ಕದ್ದು ತಿನ್ನುವ ಚಟವಾಗಿ ಹೋಗಿದೆ.

ಓ! ನನ್ನ ಇಷ್ಟದ, ಆದರೆ ತಿನ್ನಲು ಕಷ್ಟದ, ವಡೆಯೇ ನಿನಗೆ ಕೋಟಿ ಕೋಟಿ ಪುರಸ್ಕಾರ.

(ಇನ್ನಷ್ಟು ಆಯ್ಕೆಗಳು ಮುಂದಿನ ಸಂಚಿಕೆಯಲ್ಲಿ)



ಬಚ್ಚೇಗೌಡ್ರು ಬರುತ್ತಿದ್ದಾರೆ ದಾರಿ ಬಿಡಿ......

ಕಿ ರಂ ನಾಗರಾಜ್ ಎಂಬ ಗಾರುಡಿಗ

- ಅಬ್ದುಲ್ ರಷೀದ್

ಶ್ರಾವಣದ ಕೊನೆಯ ಶನಿವಾರ ಅಪರಾಹ್ನ, ಕೊತ್ತಂಬರಿ, ಮೆಂತೆ ಸೊಪ್ಪು, ಚೆಂಡು ಹೂ, ಸೇವಂತಿಗೆ, ಕುಂಕುಮ, ಅಗರಬತ್ತಿ ಮತ್ತು ಬೀದಿಯ ತುಂಬ ತಳ್ಳಾಡುತ್ತಾ ಹೆಗಲಿಗೆ ಒರೆಸಿ ಬೆವರುತ್ತ ನಡೆಯುತ್ತಿರುವ ಮಂದಿಯ ಮಿಶ್ರ ಪರಿಮಳ.

ಕಿ.ರಂ. ನನ್ನನ್ನು ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆಗೆ ತಾಗಿಕೊಂಡಿರುವ ರಸ್ತೆಗಳಲ್ಲಿ ನಡೆಸುತ್ತಿದ್ದರು. ಎಲ್ಲ ದೇವಾಲಯಗಳೂ, ದೇವ ದೇವತೆಗಳೂ ಹಳದಿಯ ಹೂಗಳಿಂದ ಅಲಂಕೃತಗೊಂಡು ಸಂಜೆಗೆ ಬರುವ ಭಕ್ತರನ್ನು ಕಾಯುತ್ತಿದ್ದವು. ಈ ದೇವರುಗಳು, ಈ ದೇವತೆಗಳು, ಈ ತಳ್ಳುವ ಜನರು, ಈ ಅಗಾಧ ಮನುಷ್ಯವಾಸನೆ ಮತ್ತು ಹೂವುಗಳ ಪರಿಮಳ. ನಾವು ಅವೆನ್ಯೂ ರಸ್ತೆಯ ಆ ಸಂಗೀತದ ಅಂಗಡಿಯನ್ನು ಅರಸಿಕೊಂಡು ನಡೆಯುತ್ತಿದ್ದೆವು. ಕಿ.ರಂ. ಈ ಹಳೆಯ ಸಂಗೀತದ ಅಂಗಡಿಯ ಕಥೆಯನ್ನು ಹೇಳುತ್ತಿದ್ದರು. ಅವರು ಕಾಲೇಜಿಗೆ ಹೋಗುತ್ತಿದ್ದ ದಿನಗಳು. ದೂರದ ಸೆಂಟ್ರಲ್ ಕಾಲೇಜಿಗೆ ದಿನವೂ ನಡೆಯುತ್ತಾ ದಾರಿಯಲ್ಲಿ ಸಿಗುವ ಈ ಸಂಗೀತದ ಅಂಗಡಿ, ಶೆಟ್ಟಿಯೊಬ್ಬ ಸಂಗೀತದ ಗ್ರಾಮೊಫೋನ್ ತಟ್ಟೆಗಳನ್ನು ಪೇರಿಸಿಟ್ಟು ಮಾರುತ್ತಾ, ಬಾಡಿಗೆಗೆ ನೀಡುತ್ತಾ ಕುಳಿತಿರುತ್ತಿದ್ದ. ಆತನ ಅಂಗಡಿಯ ಅಟ್ಟದಲ್ಲೊಂದು ಹಳೆಯ ಎಚ್‌ಎಂವಿ ಗ್ರಾಮೊಫೋನ್ ಯಂತ್ರ ಆತನ ಅಂಗಡಿಯ ಅಟ್ಟದಲ್ಲಿ ದೇವತೆಯಂತೆ ಕೂತಿರುತ್ತಿತ್ತು. ಆತ ಕೇಳಿದವರಿಗೆ ಈ ಸಂಗೀತದ ತಟ್ಟೆಗಳನ್ನು ಬಿಕರಿ ಮಾಡುತ್ತಾ, ಬಾಡಿಗೆಗೆ ಕೊಡುತ್ತಾ, ಕೊಳ್ಳಲಾಗದ ಹುಡುಗರಿಗೆ ಹಾಡಿಸಿ ಕೇಳಿಸುತ್ತಾ ಬೇಕಾದವರಿಗೆ ಗ್ರಾಮೊಫೋನಿನ ಮುಳ್ಳುಗಳ ಪೆಟ್ಟಿಗೆಯನ್ನು ಬೆಂಕಿ ಪೆಟ್ಟಿಗೆಯಂತೆ ಮಾರುತ್ತಾ ಅಂಗಡಿಯ ತುಂಬಾ ಓಡಾಡುತ್ತಾ ನಗುತ್ತಾ ಇರುತ್ತಿದ್ದ. ಈ ಶೆಟ್ಟಿ ಸ್ವಾತಂತ್ರ್ಯ ದಿನಾಚರಣೆಯ ದಿವಸ ಕಾಳಿಂಗರಾಯರು ಹಾಡಿದ ದೇಶಭಕ್ತಿ ಗೀತೆಗಳನ್ನು ಬೀದಿ ತುಂಬ ಕೇಳಿಸುವಂತೆ ಹಾಕುತ್ತಿದ್ದ. ಕಾಲೇಜಿಗೆ ಹೋಗುತ್ತಿದ್ದ ಕಿ.ರಂ. ದಾರಿಯಲ್ಲಿ ಈ ಸಂಗೀತದ ಅಂಗಡಿಯಲ್ಲಿ ಅವಕ್ಕಾಗಿ ನಿಂತು, ಈ ತಟ್ಟೆಗಳನ್ನು ಮೋಹದಿಂದ ನೋಡಿ, ಪ್ರೀತಿಯಿಂದ ಸವರಿ, ದಿನಕ್ಕೊಂದರಂತೆ ಜೋಪಾನದಿಂದ ಕೊಂಡು ಹೋಗಿ ಕೇಳಿ ಹಿಂತಿರುಗಿಸಿ ಪುನಃ ಬಂದು ತೆಗೆದುಕೊಂಡು ಹೋಗುತ್ತಿದ್ದರು. ಅಪರೂಪಕ್ಕೆ ಈ ಶೆಟ್ಟಿಯ ಸಂಗೀತದ ಅಂಗಡಿಯಿಂದ ಮೊಜಾರ್ಟನ ಸಿಂಫೋನಿ ಕೇಳಿ ಬರುತ್ತಿತ್ತು. ಈ ಶೆಟ್ಟರು ಮೊಜಾರ್ಟನ ಸಂಗೀತ ಕೇಳುತ್ತಾ ಕುಳಿತಿರುತ್ತಿದ್ದರು.

ಕಿ.ರಂ. ಹತ್ತು ಇಪ್ಪತ್ತು ವರ್ಷಗಳ ಹಿಂದೆ ಇದ್ದ ಈ ಅಂಗಡಿಯನ್ನು ನೆನಪಿಸಿಕೊಳ್ಳುತ್ತಾ ನಾವಿಬ್ಬರೂ ಆ ನೆನಪ ವಾಸನೆ ಹಿಡಿದುಕೊಂಡು ಬೆಂಗಳೂರಿನ ಈ ಅಸಾಧ್ಯ ರಂಗು ರಂಗಿನ ಶ್ರಾವಣ ಶನಿವಾರ ಮಧ್ಯಾಹ್ನ ನಡೆಯುತ್ತಿದ್ದೆವು. ನಾವಿಬ್ಬರೂ ಆ ಅಂಗಡಿ ಈಗಲೂ ಹಾಗೇ



ಇರಬಹುದು ಎಂದು ನಂಬಿರಲಿಲ್ಲ. ಆದರೂ ಇರಬಹುದು ಎಂಬ ಆಸೆಯಿಂದ ನಡೆಯುತ್ತಿದ್ದೆವು. ನನಗಾದರೂ ನೂರಾರು ವರುಷಗಳ ಹಿಂದೆ ವಿಜಯನಗರ ಸಾಮ್ರಾಜ್ಯದ ಹಂಪಿಯಲ್ಲಿ ಮುತ್ತು ರತ್ನ ಮಾಣಿಕ್ಯಗಳನ್ನು ಬೀದಿಯಲ್ಲಿ ಕಡಲೇಪುರಿ ಮಾರುವಂತೆ ರಾಶಿ ಹಾಕಿ ಮಾರುತ್ತಿದ್ದ ಕಥೆಗಳು ನೆನಪಾಗಿ ಈ ಶೆಟ್ಟರ ಸಂಗೀತದ ಅಂಗಡಿ ಅಂತಹುದೇ ಒಂದು ಕತೆಯಂತೆ ಕಂಡು ಆದರೂ ಆಸೆಯಿಂದ ಕಿ.ರಂ. ಅನ್ನು ನಂಬಿ ನಡೆಯುತ್ತಿದ್ದೆ. ನಂಬಿದವರಿಗೆ ಇಂಬು ಕೊಡುವ ದೈವದಂತೆ 'ಕಿ.ರಂ.' ಆ ಅಂಗಡಿಯ ಮುಂದೆ ನಿಲ್ಲಿಸಿದರು. ಶೆಟ್ಟರು ತೀರಿ ಹೋದರೂ ಶೆಟ್ಟರ ಮಗ ಸಣ್ಣ ಶೆಟ್ಟರು ಡಾಳಾಗಿ ಹಣೆಗೆ ಉದ್ದದ ನಾಮವೊಂದನ್ನು ಎಳೆದುಕೊಂಡು ಬೆಳ್ಳಗೆ ನಗುತ್ತಾ ಅದೇ ಹಳೆಯ ಎಪ್ಪತ್ತೇಳು ಆರ್ಪಿಎಂ ಹಿತ್ತಾಳೆಯ ಹಾನರ್‌ರಿನ ಗ್ರಾಮೊಫೋನ್ ಹಿಂದೆ ಕುಳಿತಿದ್ದರು. ಕಿ.ರಂ. ತುಂಟನಂತೆ ನಗುತ್ತಿದ್ದರು. ಇಂತಹುದೇ ಈ ಹೊತ್ತಿನಲ್ಲಿ ಇಲ್ಲೇ ಈ ಬೀದಿಯಲ್ಲಿ ಎಂದೆಂದಿಗೂ ಈ ಅಂಗಡಿ ಹೀಗೆ ಇರುತ್ತದೆ ಎಂದು ತಿಳಿದುಕೊಂಡ ಕಾಲಜ್ಞಾನಿಯಂತೆ ಇತ್ತು ಅವರ ಮುಖ. ಅವೆನ್ಯೂ ರಸ್ತೆಯಲ್ಲಿ ಶ್ರಾವಣದ ಕೊನೆಯ ಆ ಮಧ್ಯಾಹ್ನ ನಾನು ಮೊಜಾರ್ಟನ ಸಂಗೀತವನ್ನು ಮನಸಿನಲ್ಲೇ ಕೇಳಿಸಿಕೊಳ್ಳುತ್ತಿದ್ದೆ. ಕಿ.ರಂ. ಕಾಲವನ್ನು ಕೀಲಿಕೈ ಹಾಕಿ ತೆರೆದು ತೋರಿಸುತ್ತಿದ್ದರು. ಆ ಅಂಗಡಿಯ ಶೆಟ್ಟರ ಮಗ, ಆ ಅಂಗಡಿಯ ಸಂಗೀತ, ಶ್ರಾವಣ ಶನಿವಾರದ ಆ ಜನ ಜಾತ್ರೆ, ಹೂ, ಕುಂಕುಮ, ಸಂಗೀತ, ಸುಗಂಧ ಹಾಗೂ ಮನುಷ್ಯವಾಸನೆ. ಕಿ.ರಂ. ಏನೂ ಗೊತ್ತಿಲ್ಲದಂತೆ ನನಗೆ ಲೋಕ ದರ್ಶನ ಮಾಡಿಸಿ ನಗುತ್ತಾ ನಿಂತಿದ್ದರು.

'ಮಳೆಗಾಲದಲ್ಲಿ ಕಡಲು ಹೇಗಿರುತ್ತದೆ?' ಕಿ.ರಂ. ಸಣ್ಣ ಹುಡುಗನ ಹಾಗೆ ಕೇಳಿದ್ದನ್ನೇ ಎರಡು ಮೂರು ಬಾರಿ ಕೇಳುತ್ತಿದ್ದರು. ನಾವು ನಡೆದೂ ನಡೆದೂ ಕೆ.ಆರ್. ಮಾರುಕಟ್ಟೆಯ ಅಂಚಿನಲ್ಲೇ ಸುತ್ತು ಹಾಕುತ್ತಾ ಹಾಗೇ ಕೋಟೆ ಪ್ರದೇಶದ ಹತ್ತಿರ ಬಂದು ಟಿಪ್ಪೂ ಸುಲ್ತಾನನ ಬೇಸಿಗೆ ಅರಮನೆಯ ಗೋಡೆಗೆ ಬೆನ್ನು ಕೊಟ್ಟು ಕೂತು ಬೀಡಿ ಸೇದುತ್ತಿದ್ದೆವು. ತಾನು ಬೆಂಗಳೂರಲ್ಲಿ ಇಲ್ಲವೇ ಇಲ್ಲ ಎನ್ನುವ ಹಾಗೆ ಈ ಚಂದದ ಮಣ್ಣಿನ ಅರಮನೆ ಯಾವುದೇ ಮಾನವ ಸಹವಾಸವಿಲ್ಲದೆ ಆರಾಮವಾಗಿ ಮಲಗಿತ್ತು. ದೇವನಹಳ್ಳಿಯ ಹೈದರಾಲಿ ಬೇಸಿಗೆಗೆ ಅಂತ ಬೆಂಗಳೂರಲ್ಲಿ ಕಟ್ಟಿಸಿದ ಮಣ್ಣಿನ ಗೋಡೆಯ ಮರದ ತೊಲೆಗಳ ಅರಮನೆ. ಈ ಅರಮನೆಯ ಮುಂದೆ ಹೂ ತೋಟವಿತ್ತಂತೆ. ಆಫ್ಘಾನಿಸ್ಥಾನದಿಂದ ತರಿಸಿ ನೆಡಿಸಿದ ಮರಗಳಿದ್ದುವಂತೆ. ಈಗ ನೋಡಿದರೆ ಎಲ್ಲವೂ ಸುಳ್ಳು ಎನ್ನುವ ಹಾಗೆ ಸುಮ್ಮನೆ ಮಲಗಿತ್ತು.

ಕಿ.ರಂ. ಈ ಅರಮನೆಯ ಗೋಡೆಗೆ ಬೆನ್ನು ತಾಗಿಸಿ ಕೂರಿಸಿಕೊಂಡು ಕತೆ ಹೇಳುತ್ತಿದ್ದರು. ಕಿ.ರಂ. ಅಜಂತಾ ಎಲ್ಲೋರಾಕ್ಕೆ ಹೋಗುವ ಮೊದಲು ಬರುವ ಔರಂಗಾಬಾದಿನ ಕೋಟೆ ಕೊತ್ತಲಗಳ ಕುರಿತು ಮಾತನಾಡಲು ತೊಡಗಿದರು. ಈ ಇತಿಹಾಸ ಕತೆಗಳ ಕಾಲಾಂತರ ಹೀಗೆ ಹಿಗ್ಗಾಮುಗ್ಗಾ ಜಂಪ್ ಹೊಡೆಯುತ್ತಿರುವುದು ಕಂಡು ಕಂಗಾಲಾಗಿ ಕಿ.ರಂ. ಅನ್ನೇ ನೋಡುತ್ತಾ ಕುಳಿತಿದ್ದೆ. ಪಕ್ಕದ ಗುಡಿಯಿಂದ ಹೆಣ್ಣು ಮಗಳೊಬ್ಬಳು ಚಂದವಾಗಿ ಹಾಡುತ್ತಿರುವ ದಾಸರ ಹಾಡು, ಬೆನ್ನ ಹಿಂದೆ ಬೇಸಿಗೆ ಅರಮನೆ, ಇಲ್ಲದ ಹೂ ತೋಟ, ಔರಂಗಾಬಾದಿನ ಕೋಟೆ ಕೊತ್ತಲಗಳ ಕಥೆಗಳು, ಸುಲ್ತಾನನೊಬ್ಬ ತನ್ನ ರಾಣಿಗಾಗಿ ತಾಜ್ಮಹಲಿನದ್ದೇ ರೀತಿ ಇರುವ ಗಾರೆಯ ಅರಮನೆ ಕಟ್ಟಿಸಿದನಂತೆ. ದೂರದಿಂದ ಹುಣ್ಣಿಮೆಯ ಬೆಳಕಿನಲ್ಲಿ ತಾಜ್ಮಹಲಿನ ಹಾಗೇ ಕಾಣುವುದಂತೆ. ಈ ಕಿ.ರಂ. ಹೇಳುವ ಕಥೆಗಳು. ನಾನು ಸುಸ್ತಾಗಿ ಅವರನ್ನೇ ನೋಡಿದೆ. ಕೀರಂ ಇಳಿದು ಹೋಗಿದ್ದಾರೆ ಅನಿಸಿತು. ಹಾಗೇ ನೋಡಿದೆ. ಬೇಂದ್ರೆಯ ಕುರಿತು ಮಾತನಾಡುತ್ತಾ ಹಾಗೇ ಅತ್ತೇ ಬಿಡುವ ಕಿ.ರಂ. ಎಲ್ಲರೂ ಕೀರಂ ಶರಾಬು ಕುಡಿದು ಹಾಗೆ ಮಾತನಾಡುತ್ತಾರೆ ಅನ್ನುತ್ತಾರೆ. ಕೀರಂ ಕುಡಿಯದೆಯೂ ಹಾಗೇ ಮಾತನಾಡುವುದನ್ನು ನಾನು ಕಂಡಿದ್ದೆ. ಈಗ ನೋಡಿದರೆ ಕಿ.ರಂ. ಏನೂ ಮಾತಾಡದೆಯೇ ಕುಡಿಯದೆಯೇ ಹಾಗೆ ಮೌನವಾಗಿ ಈ ಬೇಸಿಗೆಯ ಮಣ್ಣಿನ ಅರಮನೆಗೆ ಒರಗಿ ಕೂತು ಎಲ್ಲ ಇತಿಹಾಸ ಕಾಲ ಕಥಾವಳಿಗಳನ್ನು ಹುಡುಗನೊಬ್ಬನ ಮುಂದೆ ದಿಗಂಬರಗೊಳಿಸುತ್ತಾ ಬಟ್ಟೆ ತೊಡಿಸುತ್ತಾ ಕೂತಿದ್ದರು. ನಂತರ ನನ್ನನ್ನೇ ಕೇಳುತ್ತಿದ್ದರು. 'ಮಳೆಗಾಲದಲ್ಲಿ ಕಡಲು ಹೇಗಿರುತ್ತದೆ?'

ಮಳೆಗಾಲದಲ್ಲಿ ಕಡಲು ಹೇಗಿರುತ್ತದೆ. ಹೇಗೆ ಹೇಳುವುದು? ಮಳೆ ಬರುತ್ತದೆ. ಆದರೆ ಕಡಲು ಹಾಗೇ ಇರುತ್ತದಾ? ಸಜ್ಜನ ಸಂತರಾದ, ಸದಾ ಉಟ್ಟದ್ದು ಕೊಳೆಯಾಗದಂತೆ ಎತ್ತಿ ಹಿಡಿದು ನಡೆಯುವ ಮರ್ಯಾದಾ ಪುರುಷರಾದ ನಾವು ಮಳೆಗಾಲದ ಕಡಲನ್ನು ಹೇಗೆಂದು ಈ ಕಿ.ರಂ. ನಾಗರಾಜ್ಗೆ ವಿವರಿಸುವುದು. ಗೊತ್ತಾಗಲಿಲ್ಲ. ಆದರೂ ವಿವರಿಸಿದೆ. ಮಳೆಗಾಲದಲ್ಲಿ ಕಡಲು ಹಾಗೆ ಇರುವುದಿಲ್ಲ ಎಂದೂ ಇಬ್ಬರಿಗೂ ಗೊತ್ತಾಯಿತು.

'ಕಾವ್ಯ ಬಂತು ಬೀದಿಗೆ' ಎಂದು ಕವಿಗಳೆಲ್ಲರೂ ತರಾತರಿಯಿಂದ ಓಡಾಡುತ್ತಾ ಮೋಟುಗೋಡೆಗಳಿಗೆ ಕಾವ್ಯ ತಾಂಬೂಲ ಉಗಿದು ಕೆಂಪು ಮಾಡುತ್ತಾ ಇದ್ದಂತಹ ಹೊತ್ತಲ್ಲಿ ಹುಡುಗರಾದ ನಮ್ಮನ್ನು ಬೆಂಗಳೂರಿನ ಬೀದಿಗಳಲ್ಲಿ ನಡೆದಾಡಿಸಿ, ತನ್ನ ಮನೆಯ ಅಟ್ಟದಲ್ಲಿ ಪುಸ್ತಕಗಳ ಸಮುದ್ರದ ನಡುವೆ ಕೂರಿಸಿ ಪಂಪನನ್ನೂ, ಬೇಂದ್ರೆಯನ್ನೂ, ಅಲ್ಲಮ್ಮನನ್ನೂ, ಶರೀಫನನ್ನೂ ಹಾಗೂ ಅಕ್ಕಮಹಾದೇವಿಯನ್ನೂ ಕಲಿಸಿ ಕೊಟ್ಟವರು ಕಿ.ರಂ. ಹಾಗೇ ಮಲ್ಲಿಕಾರ್ಜುನ ಮನ್ಸೂರರನ್ನೂ, ಕುಮಾರ ಗಂಧರ್ವರನ್ನೂ, ಆಲಿ ಅಕ್ಬರ್ ಖಾನ್‌ರನ್ನೂ ಕೇಳಿಸಿದವರು. ನಮಗೆ ಅಮೀರ್ ಖಾನ್‌ರ ಗಾಯನದ ಹುಚ್ಚು ಹಿಡಿದದ್ದು ಕಿ.ರಂ. ಜೊತೆ ಅದನ್ನು ಕೇಳಿದಾಗ, ಬೇಂದ್ರೆಯ ಕಾವ್ಯ ಕೇಳಿ ಕುಣಿದದ್ದು ಕಿ.ರಂ. ಅದನ್ನು ಓದಿದಾಗ. ಶಿಶುನಾಳ ಶರೀಫರ ಸಾಹೇಬರ ಹಾಡುಗಳನ್ನು ಎಲ್ಲರೂ ದಾಸರ ಪದದಂತೆ ಹಾಡುತ್ತಿದ್ದಾಗ ಕಿ.ರಂ. ತನ್ನ ಗಾರುಡಿಯ ಪೆಟ್ಟಿಗೆ ತೆರೆದು ಅದರೊಳಗಿರುವ ಸ್ವತಃ ಶಿಶುನಾಳ ಶರೀಫ

ಸಾಹೇಬರ ಮೊಮ್ಮಗ ಹಜರೆ ಹಾಡಿದ ತತ್ವ ಪದಗಳ ರೆಕಾರ್ಡಿಂಗ್ ಹಾಕಿ ಕೇಳಿಸಿದರು. ನಮಗೆ ನೂರು ವರ್ಷಗಳ ಹಿಂದೆ ಶರೀಫ್ ಹಾಡುತ್ತಿದ್ದ ಹಾಗೆ ಅನಿಸುವ ಹಾಗೆ ಈ ಹಾಡುಗಳು ಶರೀಫರ ಮೊಮ್ಮಗನ ಬಾಯಿಯಿಂದ ಕೇಳುತ್ತಿತ್ತು. ಕಿ.ರಂ. ತುಂಟನಂತೆ ಕಣ್ಣು ಮಿಟುಕಿಸಿ ಹಾಗೇ ಹಾಡಿನ ಕೂಡೆ ಧ್ವನಿ ಕೂಡಿಸುತ್ತಾ ಅಳು ಬಂದು ಕಣ್ಣು ಒರೆಸಿ ಕೊಳ್ಳುತ್ತಿದ್ದರು. ಕಿ.ರಂ. ಮನೆಯ ಅಟ್ಟದಲ್ಲಿ ಶರೀಫರ ಹಾಡು, ಇಂತಹ ಹೊತ್ತು ಇಂತಹ ಗಳಿಗೆ, ಇಂತಹುದೇ ಮುಹೂರ್ತ. ಈ ಕಿ.ರಂ. ಈ ನಾವು, ಈ ಶರೀಫ ಎಲ್ಲರೂ ಎಂದೆಂದಿಗೂ ಹೀಗೆ ಇರಲಿ ಎಂದು ಪ್ರಾರ್ಥಿಸುತ್ತಿದ್ದೆವು. ಆದರೆ ಹಾಡು ಕೇಳಿದ ಮೇಲೆ ಕಿ.ರಂ. 'ನಡೆಯೋ ದೇವರ ಚಾಕರಿಗೆ' ಎಂದು ಹುಡುಗರಾದ ನಮ್ಮನ್ನು ಎಬ್ಬಿಸಿ ಬೆಂಗಳೂರಿನ ಬೀದಿಗಳಲ್ಲಿ ತಿರುಗಾಡಿಸುತ್ತಿದ್ದರು.

ಬೆಂಗಳೂರಿನ ರಾತ್ರಿಗಳಲ್ಲಿ ರಾತ್ರಿಯ ಎಷ್ಟರ ಜಾವಕ್ಕೆ ಯಾವ ಬೀದಿಯ ಯಾವ ಮೂಲೆಯಲ್ಲಿ ಅತ್ಯುತ್ತಮ ಬೆಣ್ಣೆ ಇಡ್ಲಿ ಚಟ್ನಿ ಸಿಗುತ್ತದೆ ಎಂದು ಕಿ.ರಂ.ಗೆ ಗೊತ್ತಿದೆ. ಹಾಗೇ ಬೆಂಗಳೂರಿನ ಅತ್ಯುತ್ತಮ ಪೂರಿ ಸಾಗು ಸಿಗುವ ಜಾಗ, ಹಾಗೇ ಖಾರದ ಪುಡಿ ಮಸಾಲೆ, ಹಾಗೇ ಗಂಧದ ಕಡ್ಡಿ ಹಾಗೇ ಅತ್ತರು ಎಲ್ಲವೂ ಎಲ್ಲಿ ಎಂದು ಕಿ.ರಂ.ಗೆ ಗೊತ್ತು. ಅತ್ಯುತ್ತಮ ಕಾವ್ಯ ಎಲ್ಲಿದೆ ಎಂದು ತೋರು ಬೆರಳಿಂದ ಮುಟ್ಟಿ ಸಾಲುಗಳನ್ನು ತೋರಿಸುವಂತೆ ಕಿ.ರಂ. ಎಂಬ ಈ ನಗರ ವಿಶೇಷ ಪರಿಣಿತಮತಿ ನಮಗೆ ಬೆಂಗಳೂರನ್ನು ತೋರಿಸಿದ್ದರು.

ಹದಿನಾರು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಭೇಟಿ ಆದಾಗ ನಾನು ಮತ್ತು ಕಿ.ರಂ. ಒಂದೇ ಸ್ಥಿತಿಯಲ್ಲಿದ್ದೆವು. ಕೀರಂ ಮಂಗಳೂರಿಗೆ ಬಂದಿದ್ದಾರೆ ಅಂತ ಗೊತ್ತಾಯಿತು. ಹೋಗಿ ನೋಡಿದರೆ ಹೋಟಲಿನ ಕೋಣೆಯೊಂದರಲ್ಲಿ ಮಂಗಳೂರಿನ ಬರಹಗಾರರು ಕಿ.ರಂ. ಅನ್ನು ಮುತ್ತಿಕೊಂಡಿದ್ದರು. ಕುಡಿಸಿದರೆ ಕಿ.ರಂ. ಸಾಹಿತ್ಯದ ಕುರಿತು ಇನ್ನೂ ಚೆನ್ನಾಗಿ ಮಾತನಾಡುತ್ತಾರೆ ಎಂಬ ಹುನ್ನಾರದಿಂದ ಅವರೆಲ್ಲ ಕೂಡಿರುವಂತೆ ಕಂಡಿತು. ಮಾತನಾಡದೆ ಹಿಂದಕ್ಕೆ ಹೋಗಿ ಮಾರನೆಯ ಬೆಳಗ್ಗೆ ಬಂದು ನೋಡಿದೆ. ಕಿ.ರಂ. ಸುಸ್ತಾಗಿದ್ದರು. ಇವರ ಸಾಹಿತಿಗಳ ಸಂಘ ಕಂಡು ಬೇಜಾರಾಗಿತ್ತು. ಬನ್ನಿ ಹೋಗೋಣ ಅಂತ ಹಳೆಯ ಬಂದರಿಗೆ ಹೋಗಿ ದೋಣಿಯಲ್ಲಿ ಕುಳಿತು ಗುರುಪುರ ನದಿಯನ್ನು ದಾಟಿ, ಬೆಂಗರೆಯಲ್ಲಿ ಇಳಿದು ಬೆಂಗರೆಯ ಮರಳ ರಾಶಿಯಲ್ಲಿ ಕಡಲನ್ನು ನೋಡುತ್ತಾ ಕುಳಿತೆವು. ಜನವರಿ ತಿಂಗಳ ಬೆಳಗಿನ ಮಂಜು ಕರಗಿ ಸೂರ್ಯ ಪ್ರಖರವಾಗಿ ಬೆಳ್ಳಗೆ ಮರಳಿನ ಮೇಲೆ ಉರಿಯುತ್ತಿದ್ದ, ಇಬ್ಬರಿಗೂ ಸೂರ್ಯನನ್ನು ತಡಕೊಳ್ಳಲಾಗದೇ ಪುನಃ ದೋಣಿ ಹತ್ತಿ ಹಿಂದಕ್ಕೆ ಬಂದು ಮಂಗಳೂರಿನ ಬೀದಿಗಳ ತುಂಬ ಅಲೆದಿದ್ದೆವು. ತಲೆ 'ಧಿಂ' ಅನ್ನುತ್ತಿತ್ತು. ತಲೆಯೊಳಗೆ ಬೆಂಗರೆಯ ಸೂರ್ಯ.... ಕಿ.ರಂ. ರೈಲು ಹತ್ತಿ ಬೆಂಗಳೂರಿಗೆ ಹೊರಟು ಹೋಗಿದ್ದರು. ಈಗ ಬೆಂಗಳೂರಲ್ಲಿ ಕುಳಿತು ಮಳೆಗಾಲದಲ್ಲಿ ಕಡಲು ಹೇಗಿರುತ್ತದೆ ಎಂದು ಕೇಳುತ್ತಿದ್ದರು. ಕಿ.ರಂ. ನಮಗೆ ದ್ರಾಕ್ಷಾರಸ, ಕಾವ್ಯ ಹಾಗೂ ಸಂಗೀತವನ್ನು ಕಲಿಸಿದವರು. ಸಂಗೀತದ ಅಂಗಡಿಯಲ್ಲಿ ತತ್ವಜ್ಞಾನವನ್ನೂ, ಸಾರಾಯಿಯ ಅಡ್ಡೆಯಲಲಿ ಕೈವಲ್ಯವನ್ನೂ ಹಾಗೂ ಕವಿತೆಗಳಲ್ಲಿ

ಕುಣಿತವನ್ನೂ ತೋರಿಸಿಕೊಟ್ಟವರು. ಬಸವನಗುಡಿಯ ಗಾಂಧೀಬಜಾರಿನಲ್ಲಿ ಪ್ರಾರ್ಥನಾ ಸ್ಥಳದಂತಿರುವ ಮಿಲಿಟರಿ ಹೋಟೆಲಿನಲ್ಲಿ ಕೂರಿಸಿಕೊಂಡು ರಾಗಿ ಮುದ್ದೆಯನ್ನು ಹೇಗೆ ಮುರಿದು ತಿನ್ನಬೇಕೆಂದು ತೋರಿಸಿಕೊಡುತ್ತಿದ್ದರು. ನಾನು ಮತ್ತೆ ಹುಡುಗನಾಗಿ ರಾಗಿ ಮುರಿಯುವ ಅವರ ಬೆರಳುಗಳನ್ನೇ ಅನುಕರಿಸುತ್ತಾ, ಮಾಂಸದ ಕೀಮಾ ಉಂಡೆಗಳನ್ನು ಜಗಿದು ಸಾರಿನಲ್ಲಿ ಗಂಟಲಿನೊಳಕ್ಕೆ ಇಳಿಸುತ್ತಿದ್ದೆ. ಪ್ರಾರ್ಥನಾ ಸ್ಥಳದಂತಹ ಮಾಂಸಾಹಾರಿ ಹೋಟೆಲು, ಸಸ್ಯಹಾರಿಯಾದ ಕಿ.ರಂ. ಪ್ರೀತಿಯಿಂದ ಒತ್ತಾಯ ಪೂರ್ವಕವಾಗಿ ನಡೆಸಿಕೊಂಡ ತಂದು ಕೂರಿಸಿ ಮಾಂಸದ ಸಾರು ಮುದ್ದೆಯನ್ನು ತಿನ್ನಿಸುತ್ತಿದ್ದರು. ನಾನು ಜೀವಮಾನದಲ್ಲಿ ಮೊದಲ ಬಾರಿಗೆ ಎಂಬಂತೆ ತಿನ್ನುತ್ತಾ ಬೆವರುತ್ತಿದ್ದೆ ಮತ್ತು ಬೆವರುತ್ತಾ ತಿನ್ನುತ್ತಿದ್ದೆ. ಕಿ.ರಂ. ನೋಡುತ್ತಿದ್ದರು. ನನಗೆ ಏನೂ ಹೇಳಲಾಗದೆ ಹಾಗೆ ಅವರು ನನ್ನನ್ನು ನೋಡಿಕೊಳ್ಳುತ್ತಿದ್ದರು. 'ಈ ಕಾವ್ಯದಂತಹ ಕೀಮಾ ಉಂಡೆಗಳು' ಎಂದು ತೊದಲಬೇಕು ಅನಿಸುತ್ತಿತ್ತು.

✵

ಅಸಹಾಯಕತೆ

50 ದಾಟಿದ ಮಹಿಳೆಯ ಕತೆ ಇದು. ಆಕೆಗೆ ಹೃದಯಾಘಾತವಾಯಿತು. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸೇರಿಸಲಾಯಿತು. ಆಪರೇಷನ್‌ಗೆಂದು ಮಲಗಿದ್ದಾಗ ಆಕೆಗೆ ಸಾವಿನ ಸಮೀಪಾನುಭವ ಆಯಿತು. ದೇವರನ್ನು ಕಂಡ ಆಕೆ ನನ್ನ ಕಾಲ ಮುಗಿಯಿತೆ? ಎಂದು ಕೇಳಿದಳು.

ಛೆ! ಇಲ್ಲ, ನನ್ನ ದಾಖಲೆ ಪ್ರಕಾರ ನೀನು ಇನ್ನೂ 40 ವರ್ಷ, 6 ತಿಂಗಳು, 26 ದಿನ ಬದುಕಿರುತ್ತೀಯಾ ಎಂದು ದೇವ ಉತ್ತರಿಸಿದ:

ಚಿಕಿತ್ಸೆ ಮುಗಿದ ನಂತರ ಅವಳು ಆಸ್ಪತ್ರೆಯಲ್ಲೇ ಉಳಿದು ಫೇಸ್ ಲಿಫ್ಟ್, ಲಿಪೋಸಕ್ಷನ್ ಮುಂತಾದವುಗಳ ಮೂಲಕ ತನ್ನ ಚಹರೆಯನ್ನೇ ಬದಲಿಸಿಕೊಂಡಳು. ಹೇಗೂ 40 ವರ್ಷ ಬದುಕುವುದು ಇದೆಯಲ್ಲಾ, ಸ್ವಲ್ಪ ಯಂಗ್ ಆಗಿ ಮಾಡರ್ನ್ ಆಗಿ ಕಾಣುವ ಉದ್ದೇಶ ಅವಳದ್ದು. ಹೇರ್ ಸ್ಟೈಲ್ ಬದಲಾಯಿತು. ಕೂದಲಿನ ಬಣ್ಣ ಬದಲಾಯಿತು. ಹಲ್ಲುಗಳು ಲಕ ಲಕ ಹೊಳೆಯುವಂತೆ ಪಾಲಿಷ್ ಮಾಡಿಸಿಕೊಂಡಳು.

ಹೊಸ ಲುಕ್ ಪಡೆದುಕೊಂಡ ಅವಳು ಖುಷಿಯಿಂದ ಮನೆಗೆ ಹೊರಟಳು. ಮಾರ್ಗದಲ್ಲಿ ಅಪಘಾತವಾಯಿತು. ಸ್ಪಾಟ್ ಡೆತ್.

ಸ್ವರ್ಗದಲ್ಲಿ ದೇವರ ಮುಂದೆ ನಿಂತಾಗ ದೇವಾ, ನನಗೆ ಇನ್ನೂ 40 ವರ್ಷ ಆಯಸ್ಸು ಇತ್ತು. ನೀನೇಕೆ ನನ್ನನ್ನು ಉಳಿಸಲಿಲ್ಲ? ಎಂದು ಆವೇಶದಿಂದ ಕೇಳಿದಳು.

ಓ! ಹೌದಲ್ಲವೆ? ಆದರೆ ನೀನು ನನಗೆ ಗುರುತೇ ಸಿಗಲಿಲ್ಲವಲ್ಲ ಎಂದು ದೇವ ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದ.

– ಧೃತರಾಷ್ಟ್ರ

ನಿಮಗೆ ಹಣ ಬೇಕೆ?

- ಎಚ್ಚೆಸ್ಕೆ

ಪ್ರಪಂಚದಲ್ಲಿ ಎಲ್ಲ ಆಸೆಗಳಿಗೂ ಮಿತಿಯುಂಟು. ತಿನ್ನುವ ಅನ್ನ, ನೋಡುವ ನೋಟ, ಪಡುವ ಸುಖ, ಮಾಡುವ ಅಧಿಕಾರ - ಎಲ್ಲವೂ ಒಂದು ಮಿತಿ ಮೀರಿದಾಗ ಬೇಸರ ಬರಿಸುವುದುಂಟು. ಅಲ್ಲಿಂದಾಚೆಗೆ ಅದರ ಬಗೆಗೆ ದ್ವೇಷವೇ ಉಂಟಾದೀತು. ಹಸಿವಾದವನಿಗೆ ಅವನು ತಿನ್ನುವಷ್ಟು ಚೊಕ್ಕ ಭೋಜನ ಹಾಕಿಸಿ, ತೃಪ್ತಿಯಾಗುವಷ್ಟು ಉಂಡ ಮೇಲೆ ಮತ್ತೆ ಅವನು ಅದನ್ನು ಕೇಳುವುದಿಲ್ಲ. ತಾತ್ಕಾಲಿಕವಾಗಿ ಅವನಿಗೆ ಅನ್ನದ್ವೇಷ. ಆದರೆ ಹಣ ಮಾತ್ರ ಹೀಗಲ್ಲ. ಸೇರಿದಷ್ಟೂ ಬರ ಜಾಸ್ತಿ. ಹಣದ ಗರ ಬಡಿದವನಿಗೆ ತೃಪ್ತಿಯೇ ನಾಸ್ತಿ.

ಮನುಷ್ಯರ ಮಾತು ಅಂತಿರಲಿ. ದೇವರಿಗೂ ಈ ಕಾಲದಲ್ಲಿ ಹಣದ ಆಸೆ. ಪತ್ರ, ಪುಷ್ಪ ಫಲ, ತೀರ್ಥ ಇವುಗಳಲ್ಲಿ ಏನು ಕೊಟ್ಟರೂ ಸಾಕು; ನಿಮ್ಮ ಭಕ್ತಿಯೊಂದು ಬೇಕು – ಎನ್ನುತ್ತಿದ್ದ ದೇವರು, ಒಂದು ಕಾಲದಲ್ಲಿ. ಆದರೆ ಈ ಕಾಲದಲ್ಲಿ ಇಷ್ಟೊಂದು ಅಲ್ಪ ತೃಪ್ತಿ ಉಳ್ಳ ದೇವರು ಕಾಣಸಿಗುವುದೇ ಇಲ್ಲ. ಬಟ್ಟೆಗೆ ತಕ್ಕ ಹಾಗೆ ಅಂಗಿ ಕತ್ತರಿಸುವ ದರ್ಜಿಯಂತೆ ಈ ಕಾಲದ ದೇವರು. ಧನಶಕ್ತಿ ಅಂತಸ್ತುಗಳಿಗೆ ಅನುಗುಣವಾಗಿ ಸ್ವರ್ಗಕ್ಕೆ ಅಡ್ವಾನ್ಸ್ ಬುಕಿಂಗು. 'ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು' ಎಂದು ಬಸವಣ್ಣನವರು ಬಹಳ ಹಿಂದೆ ಹೇಳಿದ ವಚನದಲ್ಲಿ ಮೊದಲನೆಯ ಎರಡು ಮಾತಿಗೆ ಈಗ ಪ್ರಾಮುಖ್ಯವಿಲ್ಲ. ತನುವನಲ್ಲಾಡಿಸದೆಯೇ ದೇವರ ಸೇವೆ ಮಾಡುವುದು ಈಗ ಸಾಧ್ಯ. ಕುಡಿದ ನೀರು ಅಳ್ಳಾಡದೆಯೇ ತಿರುಪತಿ ಬೆಟ್ಟದ ಮೇಲಕ್ಕೆ ಸೇರಬಹುದು. ಮನವನಲ್ಲಾಡಿಸದೆಯೇ ಭಕ್ತಶಿರೋಮಣಿಯಾಗಬಹುದು. ಎಲ್ಲಕ್ಕೂ ಬೇಕಾಗುವುದು ಧನ. ಧನವನಲ್ಲಾಡಿಸಲು ಮಾತ್ರ ಭಕ್ತನಾದವನು ಹಿಂಜರಿಯಲೇಬಾರದು. ಹಿಂಜರಿಯದಿದ್ದಷ್ಟೂ ಭಕ್ತಿಯ ಫಲ ಜಾಸ್ತಿ. ದುಡ್ಡಿನ ಡಬ್ಬಿಯನ್ನು ದೇವರ ಮುಂದೆ ಎಷ್ಟು ಜೋರಾಗಿ ಅಳ್ಳಾಡಿಸುತ್ತೀರೋ ನಿಮಗೆ ಅಷ್ಟು ಹೆಚ್ಚು ಪುಣ್ಯ. ಅಷ್ಟರ ಮಟ್ಟಿಗೆ ನಿಮಗೆ ಫಲ ಪ್ರಾಪ್ತಿ. ಇದು ಹಣದ ಮಹಿಮೆ.

ಹಣದ ಮಹಿಮೆ ಬಣ್ಣಿಸಲಸದಳ. ದಾಸವರೇಣ್ಯರೂ ಶರಣಶ್ರೇಷ್ಠರೂ ಇದರ ವಿಚಾರವಾಗಿ ಹಲವು ಬಗೆಯಾಗಿ ಹಾಡಿದ್ದಾರೆ, ವಚನ ರಚಿಸಿದ್ದಾರೆ. ಜೀವನದಲ್ಲಿ ಜಯ ಗಳಿಸಲು, ಸುಖದ ಸೋಪಾನವೇರಲು, ಪ್ರತಿಷ್ಠೆಯ ಸಿಂಹಾಸನದಲ್ಲಿ ಕೂರಲು ನಿಮಗೆ ಬೇರೇನೂ ಸಾಧನ ಬೇಡ. ಹಣವೊಂದಿದ್ದರೆ ಸಾಕು. ಸರ್ಕಾರದ ಮುದ್ರೆಯ ಕಾಗದವೇ ಎಲ್ಲಕ್ಕೂ ಪ್ರವೇಶಪತ್ರ. ಅದನ್ನು ಡಾಕ್ಟರಿಗೆ ತೋರಿಸಿ, ಹೋಗುತ್ತಿರುವ ಜೀವ ಬರಿಸಬಹುದು. ನೋಟು ಹಾಕಿ ಸರಕಾರಿ ಆಜ್ಞೆ ಹೊರಡಿಸಬಹುದು. ನೋಟಿನ ಕಂತೆ ಒಗೆದು ಹಿರಿತನ ಗಳಿಸಬಹುದು. ಹಣ ಯಾರಲ್ಲಿ ಉಂಟೋ ಅವರ ಮಾತಿಗೆ ಬೆಲೆ, ಅವರ ತಲೆಯೇ ಜ್ಞಾನಭಂಡಾರ.

ಹಣಗಳಿಕೆಯ ವಿಧಾನ ಹೇಳಲು ಹೊರಟ ನಾನು ಹಣದ ಗುಣಕಥನ ಮಾಡತೊಡಗಿದೆನಲ್ಲವೆ? ಆದರೆ ಹಣದ ವಿಚಾರ ಬಂದಾಗ ಎಲ್ಲರೂ ಹೀಗೇ. ಹಣದ ಮುಂದೆ ಹಾದಿ ತಪ್ಪದೆ ನೇರವಾಗಿ ನಡೆಯುವವರೇ ಅಪರೂಪ.

ದುಡಿಮೆಯೇ ದುಡ್ಡು ಗಳಿಸಲು ದೊಡ್ಡ ಹಾದಿ ಎಂದು ಹೇಳುವವರು ಹಲವರುಂಟು. ಆದರೆ ಇದು ಶುದ್ಧ ಸುಳ್ಳು. ಹಾಗಿದ್ದಿದ್ದರೆ ನನ್ನಂಥ ಹಲವರು ಈ ವೇಳೆಗಾಗಲೇ ಲಕ್ಷಾಧಿಕಾರಿಗಳಾಗುತ್ತಿದ್ದರು. ಮೈಮುರಿದು ದುಡಿಯುವ ಕೂಲಿಕಾರರು ಪದೇಪದೇ ಮುಷ್ಕರ ಹೂಡುತ್ತಿರಲಿಲ್ಲ. ಶ್ರಮ ಜೀವಿಗಳಷ್ಟು ಐಶ್ವರ್ಯವಂತರು ಪ್ರಪಂಚದಲ್ಲಿ ಬೇರೆ ಯಾರೂ ಇರುತ್ತಿರಲಿಲ್ಲ. ದುಡಿಮೆಯಿಂದ ಹಣ ಸಂಪಾದನೆಯಾಗುವುದೆಂದು ಬಸವಣ್ಣನಂಥವರು ಕೂಡ ನಂಬಿರಲಿಲ್ಲ. 'ಕಾಯಕವೇ ಕೈಲಾಸ' ಎಂದು ಅವರು ಹೇಳಿದರೇ ಹೊರತು, ಕಾಯಕವೇ ಕಾಂಚಾಣ ಎಂದು ಖಂಡಿತ ಹೇಳಲಿಲ್ಲ.

ಇಲ್ಲ. ದುಡಿಮೆಯಿಂದ ಹಣ ಗಳಿಸುವುದು ಸಾಧ್ಯವಿಲ್ಲ. ಅದು ಮಾರ್ಗವಲ್ಲ. ಹಣ ಗಳಿಸುವವರೆಲ್ಲಾ ದುಡಿಯುವುದಿಲ್ಲ. 'ನೀವು ಎಷ್ಟು ಹೆಚ್ಚು ದುಡಿಯುತ್ತೀರೋ, ಅಷ್ಟು ಕಡಿಮೆ ಹಣ ಸಂಪಾದನೆಯಾಗುವುದೆಂದು ಹೇಳೋಣವೆ? ಅಥವಾ, ನೀವು ಎಷ್ಟು ಕಡಿಮೆ ದುಡಿಯುವಿರೋ ಅಷ್ಟು ಹೆಚ್ಚು ಹಣ ಸಂಪಾದನೆ ಸಾಧ್ಯವೆನ್ನೋಣವೆ?

ಒಮ್ಮೆ ಒಬ್ಬ ವ್ಯಾಪಾರಿಗೆ ಯಾವುದೋ ಒಂದು ವ್ಯವಹಾರದಲ್ಲಿ ಬಹಳ ನಷ್ಟ ಸಂಭವಿಸಿತಂತೆ. ದುಃಖದಿಂದ ಮೂರ್ಛೆ ಹೋದನಂತೆ ಅವನು. ಅವನಿಗೆ ಮತ್ತೆ ಜ್ಞಾನ ಬರಿಸಲು ನೆಂಟರೂ ಇಷ್ಟರೂ ಏನೇನೋ ಮಾಡಿದರು. ವೈದ್ಯರು ಔಷಧೋಪಚಾರ ನಡೆಸಿದರು. ಏನು ಮಾಡಿದರೂ ಫಲವಾಗಲಿಲ್ಲ.

ಆ ವ್ಯಾಪಾರಿಗೆ ಜ್ಞಾನ ತಪ್ಪಿದ್ದ ಸುದ್ದಿ ಕೇಳಿ ಆತನ ಆಪ್ತ ಮಿತ್ರನೊಬ್ಬ ಬಂದ. ಅವನು ತನ್ನ ಮಿತ್ರನ ಮುಖ ನೋಡಿದ. ಜ್ಞಾನ ತಪ್ಪಿ ಮಲಗಿದ್ದವನ ಮುಖದಲ್ಲಿ ಅಚ್ಚೊತ್ತಿದ್ದ ಖೇದದ ಸ್ವರೂಪವನ್ನು ಪರಿಶೀಲಿಸಿದ. ಜ್ಞಾನ ತಪ್ಪಲು ಕಾರಣವೇನೆಂಬುದನ್ನು ವಿಚಾರಿಸಿ ತಿಳಿದುಕೊಂಡ. ಕೊನೆಗೆ ಒಂದು ಸಲಹೆ ಮಾಡಿದ.

'ನಿಮ್ಮ ಉಪಚಾರಗಳಿಂದ ಅವನಿಗೆ ಜ್ಞಾನ ಬರುವುದಿಲ್ಲ. ನೂರು ರೂಪಾಯಿ ನೋಟು ತಂದು ಅದರಿಂದ ಅವನಿಗೆ ಗಾಳಿ ಬೀಸಿ. ಜ್ಞಾನ ಬರುತ್ತದೆ' ಎಂದ.

ಸುತ್ತಮುತ್ತ ಸೇರಿದ್ದವರು ಮೊದಲು ಈ ಮಾತು ನಂಬಲಿಲ್ಲ. ಆದರೂ ಪರೀಕ್ಷಿಸಿ ನೋಡೋಣವೆಂದು ಹಾಗೆಯೇ ಮಾಡಿದರು. ನೋಟಿನಿಂದ ಬರ ಬರನೆ ಅವನ ಮುಖದ ಮೇಲೆ ಗಾಳಿ ಬೀಸಿದರು.

ನೋಟಿನ ಗಾಳಿ ಮುಖಕ್ಕೆ ಬಡಿದೊಡನೆಯೇ ಅವನು ಥಟ್ಟನೆ ಕಣ್ಣು ತೆರೆದ. 'ಇದೇನು! ನೂರು ರೂಪಾಯಿ ನೋಟಿನ ಗಾಳಿ!' ಎಂದು ಕ್ಷೀಣ ಸ್ವರದಲ್ಲಿ ಹೇಳಿದ.

ನೆಂಟರಿಗೂ ಇಷ್ಟರಿಗೂ ನೆಮ್ಮದಿಯುಂಟಾಯಿತು. ನೋಟಿನ ಗಾಳಿ ಬೀಸುವ ಸಲಹೆ ಮಾಡಿದ ಮಿತ್ರನಿಗೇ ಅವರು ಆ ನೋಟನ್ನು ತಟ್ಟೆಯಲ್ಲಿಟ್ಟು ತಾಂಬೂಲ ಕೊಟ್ಟರು, ಆ ವ್ಯಾಪಾರಿಗೆ ತಿಳಿಯದ ಹಾಗೆ!

ಆದರೆ ಹಣ ಸಂಪಾದನೆಯ ಗುಟ್ಟು ಇಷ್ಟು ಸುಲಭವಲ್ಲ. ಇಷ್ಟು ಸರಳವಾದ ಮಾತಿನಲ್ಲಿ ಅದನ್ನು ಹೇಳುವುದು ಸಾಧ್ಯವಿಲ್ಲ. ಹಾಗಿದ್ದಿದ್ದರೆ ಸೋಮಾರಿಗಳೆಲ್ಲಾ ಸಾಹುಕಾರರಾಗುತ್ತಿದ್ದರು. ಹಿರಣ್ಮಯನನ್ನು ಹಿಡಿದುಕೊಳ್ಳಲು ಹಗಲೂ ರಾತ್ರಿ ಯತ್ನಿಸಿದವರು ಎಷ್ಟೋ ಮಂದಿ. ಕಬ್ಬಿಣವನ್ನು ಚಿನ್ನವಾಗಿ ಪರಿವರ್ತಿಸಲು ಪರದಾಡಿದವರ ಸಂಖ್ಯೆ ಎಣಿಕೆಗೆ ಸಿಗದಷ್ಟು! ನಟ್ಟನಡುರಾತ್ರಿಯಲ್ಲಿ ದಟ್ಟಡವಿಗೆ ಹೋಗಿ, ಸೊಪ್ಪು ಸದೆ ಬೇರು ಸಂಗ್ರಹಿಸಿ ತಂದು, ಕಬ್ಬಿಣದ ಮೇಲೆ ಅದರ ರಸ ಹಿಂಡಿ, ಚಿನ್ನವಾದೀತೆಂದು ಆಸೆಯಿಂದ ಕಣ್ಣಗಲಿಸಿ ಕೂತವರು ಎಷ್ಟೋ ಮಂದಿ. ಆದರೆ ಯಾರಿಗೂ ಚಿನ್ನ ದಕ್ಕಲಿಲ್ಲ.

ಹಣ ಬೇಕಾದವರು ಈಗ ಸೊಪ್ಪು ಮೂಲಿಕೆಗಳ ಅನ್ವೇಷಣೆ ಮಾಡಬೇಕಾದುದಿಲ್ಲ. ಯಾವುಯಾವುದನ್ನೋ ಕಾಯಿಸಿ ಬೆರಸಿ ಸುರಿಯಬೇಕಾದುದಿಲ್ಲ. ಪರಷುಮಣಿಯ ಕನಸು ಕಾಣಬೇಕಾದುದಿಲ್ಲ. ಇಂಥ ವಿಧಾನಗಳಿಗೆಲ್ಲಾ ಧನಲಕ್ಷ್ಮಿ ಒಲಿಯುವುದಿಲ್ಲ. ಚಿನ್ನವೇ ಹಣವೆಂಬ ಕಾಲವೂ ಇದಲ್ಲ. ಎಲ್ಲವೂ ಈಗ ಸರಸ್ವತೀಪ್ರಸನ್ನ; ಬ್ಯಾಂಕು ನೋಟು, ಕಾಗದದ ಕಂತೆ.

ಹಣದ ಆಸೆ ಹಿಡಿದವನಿಗೆ ಬೇರೆ ಯಾವುದನ್ನು ಕೊಟ್ಟರೂ ತೃಪ್ತಿಯಿಲ್ಲ. ಯಾವ ಔಷಧೋಪಚಾರದಿಂದಲೂ ಅವನ ವ್ಯಾಧಿ ವಾಸಿಯಾಗುವುದಿಲ್ಲ. ಅಧಿಕಾರವೂ ಅವನಿಗೆ ಬೇಡ. ಅಧಿಕಾರಿಗಳೇ ಹಣದ ಆಜ್ಞಾನುವರ್ತಿಗಳಾದ್ದರಿಂದ ಅಧಿಕಾರ ಅವನಿಗೇಕೆ ಬೇಕು? ಹಣದ್ದೇ ಪ್ರಾಧಾನ್ಯವೆಂದು ಆತ ಬಲ್ಲ. ಸರಕಾರ ಕೂಡ ಅಷ್ಟೇ: ಮೂರು ಹಣ ಕೊಟ್ಟರೆ ಇತ್ತ ಕಡೆ; ಆರು ಹಣ ಕೊಟ್ಟರೆ ಅತ್ತ ಕಡೆ. ಹಣದ ಹಿರಿಮೆಯನ್ನು ಬಲ್ಲವನೇ ಬಲ್ಲ. ಉಳಿದವರು ಏನು ಬಲ್ಲರು?

ರೊಕ್ಕ ಸಂಪಾದನೆಯ ಮಾರ್ಗಗಳು ಹಲವುಂಟು. ಆದರೆ ಆ ಮಾರ್ಗಗಳಲ್ಲಿ ಯಾವುದನ್ನೇ ಆಗಲಿ, ಅನುಸರಿಸಲು ಗಳಿಸಬೇಕಾದ ಯೋಗ್ಯತೆ ಒಂದೇ; ಇರಬೇಕಾದ ಗುಣ ಒಂದೇ. ಅದು ಎಲ್ಲರಿಗೂ ಸುಲಭವಾಗಿ ಬರುವುದಿಲ್ಲ. 'ಎಲ್ಲ ಬಲ್ಲವರಿಲ್ಲ. ಬಲ್ಲವರು ಬಹಳಿಲ್ಲ. ಬಲ್ಲಿದವರು ಇದ್ದು ಬಲ್ಲವಿಲ್ಲ. ಸಂಪತ್ತು ಎಲ್ಲರಿಗಿಲ್ಲ' ಇದು ಬಾಳಿನ ದುಃಖದ ಸಂಗತಿ. ಈ ದುಃಖವನ್ನು ಪರಿಹರಿಸುವುದೇ ನನ್ನ ಉದ್ದೇಶ.

ಜಗತ್ತಿನಲ್ಲಿ ಏನನ್ನು ಪಡೆಯಬೇಕಾದರೂ ಮೂಲತಃ ಇದ್ದೇ ಇರಬೇಕು ಹಣ. ಅಲ್ಲವೆ? ಎಂದರೆ ಹಣವೇ ಎಲ್ಲಕ್ಕೂ ಮೂಲಾಧಾರ. ಅಥವಾ ಹೀಗೆ ಹೇಳಬಹುದೇ? ಹಣಕ್ಕೆ ಎಲ್ಲವೂ ಅಧೀನ. ಹಣ ಒಡೆಯ. ಉಳಿದದ್ದೆಲ್ಲ ಅದಕ್ಕೆ ಆಳು. ಹಣದಿಂದ ಎಲ್ಲ. ಹಣವಿದ್ದರೆ ಎಲ್ಲ. ಹಣಕ್ಕೆ ಪ್ರಧಾನ ಪಟ್ಟ. ಸ್ನೇಹ, ಮಮತೆ, ಪ್ರೀತಿ, ಕರುಣೆ, ದಯೆ, ದಾಕ್ಷಿಣ್ಯ – ಎಲ್ಲವೂ ಆಮೇಲೆ. ಅವನ್ನೆಲ್ಲಾ ಕಟ್ಟಿ ಪೆಟ್ಟಿಗೆಯಲ್ಲಿಟ್ಟು ಹೃದಯದ ಕವಾಟ ತೆರೆದು ಕೂತರೆ ಆಯಿತು. ತಲೆತಪ್ಪಿಸಿಕೊಂಡಿದ್ದ ಸಾಕುನಾಯಿ ತನ್ನ ಯಜಮಾನನನ್ನು ಕಂಡೊಡನೆಯೇ ಓಡೋಡಿ ಬಂದು ಅವನ ಮುಂದೆ ಕುಸಿದು ಕೂತು ಕಾಲು ನೆಕ್ಕುವಂತೆ ಹಣ ಓಡೋಡಿ ಬರುತ್ತದೆ, ಕಂಗಾಲಾಗಿ ಕುಕ್ಕರಿಸುತ್ತದೆ, ಆಶ್ರಯ ಬಯಸಿ ಅಂಗಲಾಚುತ್ತದೆ.

ಹಣ ಗಳಿಸುವ ಆಸೆ ಹೊಂದಿರುವವರು ಮೊಟ್ಟಮೊದಲು ಗಳಿಸಬೇಕಾದ ಗುಣ ಇದು: ಹಣದ ಆಸೆ. ವ್ಯವಹಾರಸೌಕರ್ಯಕ್ಕಾಗಿ, ಒಂದು ಪದಾರ್ಥಕ್ಕೂ ಇನ್ನೊಂದು ಪದಾರ್ಥಕ್ಕೂ ಮಧ್ಯವರ್ತಿಯಾಗಿ, ಮೌಲ್ಯ ನಿರ್ಣಯಸಾಧಕವಾಗಿ ಅವತಾರ ಎತ್ತಿದ ಹಣ ಕ್ರಮೇಣ ತ್ರಿವಿಕ್ರಮಾವತಾರ ತಳೆದ ಕತೆ ಜ್ಞಾಪಿಸಿಕೊಳ್ಳಿ. ಆಗ ಹಣಕ್ಕೆ ನಿಮ್ಮ ಜೀವನದಲ್ಲಿ ಯಾವ ಸ್ಥಾನ ನೀಡಬೇಕೆಂಬುದು ಅರ್ಥವಾಗುತ್ತದೆ. ಹಣದ ಬೊಜ್ಜು ದೇಹ ಬೆಳೆದ ಬಗೆಯನ್ನು ಮಾರ್ಕ್ಸ್ ಎಂಬ ಪಾಶ್ಚಾತ್ಯ ಜ್ಞಾನಿಯೊಬ್ಬ ಮನೋಜ್ಞವಾಗಿ ಬಣ್ಣಿಸಿದ್ದಾನೆ. ನಿಮ್ಮಲ್ಲಿ ಒಂದು ಪದಾರ್ಥ ಇದೆಯೆನ್ನಿ. ಅದು ನಿಮಗೆ ಬೇಡ. ಇನ್ನಾವುದೋ ಒಂದು ಪದಾರ್ಥ ಬೇಕು. ಅದು ಇನ್ನಾರಲ್ಲೋ ಇದೆ. ಆಗ ನೀವೇನು ಮಾಡುವಿರಿ? ನಿಮ್ಮಲ್ಲಿರುವ ಪದಾರ್ಥ ಯಾರಿಗೆ ಬೇಕೋ, ಅವನಿಗೆ ಅದನ್ನು ಕೊಡುವಿರಿ. ಪ್ರತಿಯಾಗಿ ಹಣವನ್ನು ಅವನಿಂದ ಪಡೆಯುವಿರಿ. ನಿಮಗೆ ಬೇಕಿದ್ದ ಪದಾರ್ಥ ಯಾರ ಬಳಿ ಉಂಟೋ ಅವರಿಂದ ಅದನ್ನು ಆ ಹಣ ಕೊಟ್ಟು ಕೊಳ್ಳುವಿರಿ. ನಿಮಗೆ ಬೇಡವಾದ ಪದಾರ್ಥ ಕೊಟ್ಟು ಹಣ ಪಡೆದು, ಅವರಿಂದ ನಿಮಗೆ ಬೇಕಾದ ಪದಾರ್ಥ ಪಡೆಯುವುದು ಸಾಧ್ಯವಾಯಿತು, ಹಣದ ಪಾತ್ರ ಇಷ್ಟೇ.

> ಹಿಂದೆ ಯಾರೋ ಒಬ್ಬ ಹಣ ಸಂಪಾದನೆಯ ಮಾರ್ಗವನ್ನು ಜನರಿಗೆಲ್ಲಾ ಬಹಳ ಯಶಸ್ವಿಯಾಗಿ ಉಪದೇಶ ಮಾಡಿದನಂತೆ: 'ನೀವು ಹಣ ಸಂಪಾದಿಸಬೇಕೋ? ಹಾಗಾದರೆ ಒಂದು ರೂಪಾಯಿಯೊಡನೆ ನಿಮ್ಮ ಹೆಸರು ವಿಳಾಸ ತಿಳಿಸಿ' ಎಂದು ಪತ್ರಿಕೆಗಳಲ್ಲಿ ಜಾಹೀರು ಮಾಡಿದನಂತೆ. ಇದನ್ನು ಓದಿದ ಲಕ್ಷಾಂತರ ಜನರು ಅವನಿಗೆ ತಲಾ ಒಂದೊಂದು ರೂಪಾಯಿ ಕಳಿಸಿದರಂತೆ. ಅವನು ಅವರಿಗೆಲ್ಲಾ ಉತ್ತರ ಕಳಿಸಿದನಂತೆ. ಅವನು ಸೂಚಿಸಿದ ಉಪಾಯವೇನು, ಗೊತ್ತೆ? ನಾಲ್ಕೇ ಪದಗಳ ಒಂದೇ ವಾಕ್ಯದ ಉತ್ತರ 'ನಾನು ಮಾಡಿದ ಹಾಗೆಯೇ ಮಾಡಿ' ಎಂದ ಆತ ಪ್ರತಿಯೊಬ್ಬರಿಗೂ ಪತ್ರ ಬರೆದ. (ಜನರಿಂದ ಬಂದಿದ್ದ ಲಕ್ಷಾಂತರ ರೂಪಾಯಿ ಇಟ್ಟುಕೊಂಡು ಅವನು ಮುಂದೆ ಸುಖವಾಗಿ ಇದ್ದ.)

ಹೀಗೆ ಮಗುವಾಗಿ ಆರಂಭವಾದ ಹಣ ಇಂದು ಧಾಂಡಿಗನಾಗಿ ಬೆಳೆದು ನಿಂತಿದೆ. ಇಂದು ಹಣವನ್ನು ಜನರು ಯಾವ ರೀತಿ ಬಳಸುತ್ತಿದ್ದಾರೆಂಬುದನ್ನಷ್ಟು ಪರೀಕ್ಷಿಸಿ ನೋಡಿ. ಒಂದು ಪದಾರ್ಥ ಕೊಟ್ಟು ಇನ್ನೊಂದು ಪದಾರ್ಥ ಪಡೆಯುವ ಸಾಧನವಾಗಿ ಹಣದ ಜೀವನಯಾತ್ರೆ. ಆದರೆ ಈಗ ಹಾಗಲ್ಲ. ಹಣ ಕೊಟ್ಟು ಪದಾರ್ಥ ಕೊಂಡು, ಆ ಪದಾರ್ಥವನ್ನು ಹೆಚ್ಚು ಹಣಕ್ಕೆ ಮಾರಿ, ಮೊದಲಿಗಿಂತ ಹೆಚ್ಚು ಹಣ ಪಡೆದು ಶೇಖರಿಸುವುದೇ ಇಂದು ಒಂದು ಉದ್ಯೋಗ. ಮೊದಲು ಒಂದು ಮುಷ್ಟಿ ಹಣ ಕೊಟ್ಟು ಪದಾರ್ಥ ಪಡೆದು, ಆ ಪದಾರ್ಥ ಬೇಕೆಂದು ಬಾಯಿ ಬಿಡುವವರಿಗೆ ಅದನ್ನು ಮೂರು ಮುಷ್ಟಿ ಹಣಕ್ಕೆ ಮಾರಿ, ಇದ್ದ ಹಣವನ್ನು

ನಾಲ್ಕಡಿಯಾಗಿ ಮಾಡಿಕೊಳ್ಳುವುದು ಇಂದಿನ ಬುದ್ಧಿವಂತಿಕೆ. ವರ್ತಕರು ಹೀಗೆ ಹಣದ ಬೊಜ್ಜು ಬೆಳೆಸಲು ಸಾಧ್ಯವಾದ್ದು ಏತರಿಂದ? ತಾವು ಕೊಂಡ ಪದಾರ್ಥವನ್ನು ಬಳಸಿ ಸುಖಪಡಬೇಕೆಂಬ ಆಸೆ ತೊರೆದು, ಹಣಕ್ಕಾಗಿ ಆ ಸುಖವನ್ನು ತ್ಯಾಗ ಮಾಡಿದ್ದರಿಂದ, ಅಲ್ಲವೆ?

ಸರ್ವಸಂಗತ್ಯಾಗವೇ ಹಣದ ಸಂಪಾದನೆಯ ಮೂಲ. ಹಣದ ಆಸೆ ಇರುವವನು ಮಿಕ್ಕೆಲ್ಲ ಆಸೆಗಳನ್ನೂ ತೊರೆಯಬೇಕು. ಹಣ ಇರುವುದು ನಮ್ಮ ಆಸೆಗಳ ಪೂರೈಕೆಗಾಗಿಯೆಂದೂ, ನಮಗೆ ಬೇಕಾದ ಸುಖಗಳನ್ನು ಪಡೆಯುವುದಕ್ಕಾಗಿಯೆಂದೂ, ಅದು ನಮ್ಮ ಜೀವನಕ್ಕೆ ಅವಶ್ಯವೆಂದೂ ಭಾವಿಸುವ ಮೌಢ್ಯವನ್ನು ಮೊದಲು ತೊರೆಯಬೇಕು. ಹಣಕ್ಕಾಗಿ ಎಲ್ಲವನ್ನೂ ಬಿಡಲು ಸಿದ್ಧವಿರಬೇಕು. ಮನೆಗೆ ನೆಂಟರು ಬಂದರೆ ಆದಷ್ಟು ಬೇಗ ಅವರನ್ನು ರವಾನಿಸಿಬಿಡಿ. ಹಣಕ್ಕಾಗಿ ಅವರ ತ್ಯಾಗ ಮಾಡಿ. ಸ್ನೇಹಿತರಿರುವರೆ? ಮೊದಲು ಅವರನ್ನು ತೊರೆದುಬಿಡಿ. ಹಣವಿದ್ದಲ್ಲಿ ಮಿತ್ರರು ಇರುವೆಯ ದಂಡಿನಂತೆ ಮುತ್ತುವರೆಂಬುದನ್ನು ನೆನಪಿನಲ್ಲಿಡಿ. ಈ ಪಿಡುಗು ಮೊದಲು ನಿವಾರಣೆಯಾಗಬೇಕು. ಪ್ರೇಮ ಪ್ರೀತಿಗಳನ್ನೂ ದೂರ ಇರಿಸಿ. ಹಣವಿರುವವರ ಬಳಿಗೆ ಪ್ರೇಮ ತಾನಾಗಿಯೇ ಓಡಿ ಬಂದು ಮಂಡಿಯೂರಿ ಬೇಡವುದೆಂಬುದನ್ನು ನೆನಪಿನಲ್ಲಿಡಿ. ಸ್ಥಿತಿವಂತನಲ್ಲದ, ಅಥವಾ ಕೈ ತುಂಬ ಸಂಬಳ ಬಾರದ ಗಂಡಿಗೆ ಹೆಣ್ಣು ಕೊಡುವ ಕುನ್ನಿಯೂ ಉಂಟೆ? ಆದ್ದರಿಂದ ಹಣದ ಪಿಶಾಚಿಯನ್ನು ಮೈಗೆ ಹತ್ತಿಸಿಕೊಂಡು, ಉಳಿದ ಎಲ್ಲ ಪಿಶಾಚಿಗಳನ್ನೂ ದೂರ ಇರಿಸಿ. ಆಗಲೀಗ ಸಮಾಜದ ಮೆಟ್ಟಿಲೇರಿ ಮೇಲೆ ಹೋಗುವುದು ಬಹು ಸುಲಭ.

ಎಲ್ಲವನ್ನೂ, ಎಲ್ಲರನ್ನೂ ತೊರೆಯಬೇಕಾಗುವುದೆಂದು ಹೆದರಬೇಡಿ. ಹಣವೊಂದನ್ನು ಗಳಿಸಿಕೊಳ್ಳಬೇಕಾದರೆ ಈ ವೈರಾಗ್ಯಜೀವನ ಅತ್ಯಗತ್ಯ. ಅದು ಲಭಿಸಿದ ಮೇಲೆ ಉಳಿದ ಎಲ್ಲವೂ ತಾವಾಗಿಯೇ ಲಭಿಸುವುದನ್ನು ಗಮನದಲ್ಲಿಡಿ. ಹಣವೊಂದು ನಿಮ್ಮಲ್ಲಿದ್ದರೆ ಸ್ನೇಹಿತರು ಪುಕ್ಕಟೆಯಾಗಿ ನಿಮ್ಮ ಗುಣಗಾನ ಮಾಡುವರು. ಮಣ ಮಣ ಹೇರಿ ನಿಮಗೆ ಬೇಕಾದ ಹೆಣ್ಣು ಪಡೆಯಬಹುದು. 'ಕಾಮಿನೀ! ಕಾಂಚನ!' ಎಂದರೆ ಸಾಕು. ಜನ ಓಡಿಬಂದಾರು. ನಿಮ್ಮ ಅಂತಸ್ತಿನ ಸಂಪರ್ಕವನ್ನು ಬಯಸಿ ಹೆಣ್ಣು ಕೊಡುವವರು ಹೇರಳವಾಗಿ ಉಂಟು. ನೀವು ಆಡುವ ಒಂದೊಂದು ಮಾತನ್ನೂ ಚಪ್ಪರಿಸಿ ತಲೆದೂಗುವ ಸಾಹಿತಿಗಳೂ ಕಲಾವಿದರೂ ರಾಜಕಾರಣಿಗಳೂ ಬೆಂಬತ್ತಿ ಮುತ್ತುವರು. ನಾಡಿನ ಕಲೆ ಸಂಸ್ಕೃತಿಗಳನ್ನು ಪ್ರೋತ್ಸಾಹಿಸುವುದು ಸಾಧ್ಯವಾಗುವುದು. ಆದರೆ ಒಂದು ವಿಚಾರವನ್ನು ಮಾತ್ರ ಯಾವಾಗಲೂ ಜ್ಞಾಪಕದಲ್ಲಿಟ್ಟಿರಿ. ಹಣಕ್ಕೇ ನಿಮ್ಮಲ್ಲಿ ಪ್ರಧಾನ ಪಟ್ಟ. ಉಳಿದೆಲ್ಲವೂ ಅದನ್ನು ಓಲೈಸುವ ಊಳಿಗಸಮೂಹ. ಈ ಜಗತ್ತಿನಲ್ಲಿ ಸರ್ವಾಂತರ್ಯಾಮಿಯಾಗಿ ಸರ್ವದಾ ಪ್ರಭುತ್ವ ನಡೆಸುತ್ತಿರುವುದು ಹಣ. ಇದನ್ನು ಅರಿತು ನಡೆದಾಗ ಮಾತ್ರ ಅದು ನಿಮಗೆ ಪ್ರತ್ಯಕ್ಷ. ನೀವು ಆಡುವ ಪ್ರತಿಯೊಂದು ಮಾತಿನಲ್ಲೂ, ಮಾಡುವ ಪ್ರತಿಯೊಂದು ಯೋಚನೆಯಲ್ಲೂ, ಕೃತಿಯಲ್ಲೂ ಈ ಸರ್ವಾಂತರ್ಯಾಮಿಯ ಅರಿವು ಸದಾ ಜಾಗೃತವಾಗಿರಲಿ. 'ಸಕಲವೆಲ್ಲವೂ ಧನ

ಸೇವೆಯೆನ್ನಿ; ಸಾಹಂ ಕರ್ತಾ ಹಣಂ ಕರ್ತಾ' ಎಂಬುದು ನಿಮ್ಮ ತಾರಕಮಂತ್ರವಾಗಲಿ. 'ನಂಬಿ ಕೆಟ್ಟವರಿಲ್ಲವೋ ಧನದೆಯ್ಯನ.'

ದುಡ್ಡಿಗೆ ದಾಸೋಹ ಮಾಡಿದಾಗ ದೊಡ್ಡಪ್ಪತನ ತಾನಾಗಿಯೇ ಬರುತ್ತದೆ. ಭಕ್ತನ ವಶವರ್ತಿಯಾದ ಲಕ್ಷ್ಮಿಯೂ ದಾಸಿಯಂತೆ ವರ್ತಿಸುತ್ತಾಳೆ. 'ದಾಸೋಹಂ ಎಂದವನಿಗೆ ದಾಸಿ ನಾನು' ಎನ್ನುತ್ತಾಳೆ ಲಕುಮಿ. ಆದರೆ ಎಚ್ಚರಿಕೆ! ಲಕ್ಷ್ಮಿ ಬಹಳ ಚಂಚಲೆ. ಅವಳನ್ನು ಅಂಡಲೆಯಲು ಆಚೀಚೆ ಬಿಡಬೇಡಿ. ಒಲಿದು ಬಂದ ಲಕ್ಷ್ಮಿಯನ್ನು ಗಾಳಿ ಬೆಳಕು ಬಾರದ ಕಡೆ ಬೀಗ ಹಾಕಿ ಬಚ್ಚಿಡಿ. ಕತ್ತಲೆಯಲ್ಲೇ ವ್ಯವಹಾರ ನಡಸಿ ಇಮ್ಮಡಿಸಿ. ಮುಪ್ಪಿನಲ್ಲಿ ಮದುವೆಯಾದ ಸುಂದರ ತರುಣಿಯ ಮೇಲೆ ಕಣ್ಣಿಟ್ಟಿರುವ ಮುಂದಿಗಂಡನಂತೆ ನಿಮ್ಮ ಧನಲಕ್ಷ್ಮಿಯ ಮೇಲೆ ಸದಾ ಕಣ್ಣಿಟ್ಟಿರಿ. ಇಲ್ಲದಿದ್ದರೆ ಆಕೆ ಗಾಳಿಯಂತೆ ಹಾರಿ ಹೋದಾಳು. ಹಿಡಿದ ರಾಜರನ್ನೆಲ್ಲಾ ಕಲ್ಲಾಗಿ ಪರಿವರ್ತಿಸಿ ಸೆರೆಯಲ್ಲಿಟ್ಟಿರುತ್ತಿದ್ದ ರಾಕ್ಷಸನಂತೆ ಲಕ್ಷ್ಮಿಯನ್ನು ಬಂಗಾರವಾಗಿ ಪರಿವರ್ತಿಸಿ. ನಿಮ್ಮ ಹೆಂಡತಿ ಮಕ್ಕಳ ಕೊರಳುಗಳಿಗೆ ಲಕ್ಷ್ಮಿಯನ್ನು ಬಿಗಿದು ಕಟ್ಟಿ, ಮೂಗು ಕಿವಿಗಳಲ್ಲಿ ಕೊಕ್ಕೆ ಮಾಡಿ ಸಿಕ್ಕಿಸಿ. ನಡುಪಟ್ಟಿಯಾಗಿ ಕಟ್ಟಿ ಆಗ ಲಕುಮಿ ನಿಮ್ಮ ಮನೆಯ ತೊತ್ತಾಗಿ ಬಿದ್ದಿರುವಳು. ಆಗ ಲಕ್ಷ್ಮೀರಮಣ ಗೋವಿಂದನೆಂಬ ಬಿರುದಾಂಕಿತರಾಗಿ, ಹಣದ ಗುಡ್ಡೆಯ ಮೇಲೆ ಒಬ್ಬೊಂಟಿಗರಾಗಿ ನಿಂತು ಆಡಳಿತ ನಡೆಸುವುದು ನಿಮಗೆ ಸಾಧ್ಯವಾಗುತ್ತದೆ. ಹಿಮಾಲಯದ ಮಂಜಿನ ಗುಡ್ಡೆಯಂತೆ ನಿಮ್ಮ ಅಡಿಯ ಹಣದ ಗುಡ್ಡೆ ತಾನಾಗಿಯೇ ಬೆಳೆಯುತ್ತಿರುತ್ತದೆ.

ಲೇಖಕರಲ್ಲಿ ವಿನಂತಿ

ಅಪರಂಜಿಗೆ ಲೇಖನಗಳನ್ನು ಇ ಮೇಲ್ ಮುಖಾಂತರ ಕಳಿಸಲು ದಯವಿಟ್ಟು ಪ್ರಯತ್ನಿಸಿ. ನುಡಿ ಅಥವಾ ಬರಹ ತಂತ್ರಾಂಶ ಬಳಸಬಹುದು.

- ಸಂಪಾದಕರು

ಒಟ್ಟಿನಲ್ಲಿ ಇಷ್ಟು ಹೇಳಿದ ಹಾಗಾಯಿತು: ಹಣ ಗಳಿಸಲು ಬೇಕಾದ್ದು ಅದೃಷ್ಟವಲ್ಲ, ಅವಕಾಶವಲ್ಲ; ಮುಖ್ಯವಾಗಿ ಬೇಕಾದ್ದು ನಂಬಿಕೆ; ಹಣದ ಸರ್ವೋತ್ತಮತ್ವವನ್ನು ಮನಸಾರ ನಂಬಿ, ಉಳಿದೆಲ್ಲವೂ ಇದಕ್ಕೆ ಅಧೀನವೆಂಬುದನ್ನರಿತು, ಈ ನಂಬಿಕೆ ಸ್ವಲ್ಪವೂ ಕೆಡದ ಹಾಗೆ ವರ್ತಿಸುವ ದೃಢ ಚಿತ್ತ. ಇದನ್ನು ಬೆಳಸಿಕೊಳ್ಳಿ. ಉಳಿದದ್ದು ಸುಲಭ.

ಸದ್ಯಕ್ಕೆ ಇಷ್ಟಕ್ಕಿಂತ ಹೆಚ್ಚಾಗಿ ನಾನು ಹೇಳಲಾರೆ. ಇನ್ನೂ ಹೆಚ್ಚು ಅರಿಯಬೇಕೆಂಬುದು ನಿಮ್ಮ ಮನಸ್ಸಾದರೆ, ಹಣ ಗಳಿಸುವ ವಿಧಾನವನ್ನು ಕುರಿತು ನಾನು ಬರೆಯಲಿರುವ ಪುಸ್ತಕವನ್ನು ಹಣ ಕೊಟ್ಟು ಕೊಂಡು ಓದಿ.

ಸೌಜನ್ಯ: ಲೇಖಕರ 'ಸುರಹೊನ್ನೆ' ಪ್ರಬಂಧ ಸಂಕಲನದಿಂದ

✲

ಜುಟ್ಟಿಗೆ ಮಲ್ಲಿಗೆ ದಂಡೆ

ನಾವು ಒಪ್ಪಿಕೊಂಡಿರುವ ಸಂವಿಧಾನದ ಪ್ರಕಾರ ದೇಶದಲ್ಲಿ ಮಹಾಚುನಾವಣೆಗಳು ನಡೆದಾಗ - ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕರನ್ನು ಪ್ರಧಾನಮಂತ್ರಿಗಳಾಗಿ ಎಂದು ಆಹ್ವಾನಿಸಿ, ಅವರು ಕೊಟ್ಟ ಪಟ್ಟಿಯ ಪ್ರಕಾರ ಮಂತ್ರಿಗಳನ್ನಾಗಿ ಮಾಡಿ ಪ್ರಮಾಣವಚನ ಬೋಧಿಸುವುದು ರಾಷ್ಟ್ರಪತಿಗಳ ಕರ್ತವ್ಯ. ಹೀಗೆ ಒಂದು ಬಾರಿ ಪ್ರಧಾನಮಂತ್ರಿಗಳಾಗಿ ಐದು ವರ್ಷ ಪೂರ್ಣವಾಗಿ ಅಥವಾ ಲೋಕಸಭೆಯಲ್ಲಿ ಬಹುಮತ ಪಡೆದಿರುವವರೆಗೂ ಅಧಿಕಾರ ನಡೆಸುವ ಅವಕಾಶವಿರುತ್ತದೆ. ಜವಾಹರ್‌ಲಾಲ್ ನೆಹರು ಅವರ ಕಾಲದಲ್ಲಿ ಹಾಗೆಯೇ ಇಂದಿರಾ ಗಾಂಧಿಯವರ ಕಾಲದಲ್ಲೂ ಇದೇ ಪದ್ಧತಿ ಮುಂದುವರಿಯಿತು. ಇಂದಿರಾರವರ ಎರಡನೆಯ ಅಧಿಕಾರಾವಧಿಯಲ್ಲಿ ಜಯಪ್ರಕಾಶ್ ನಾರಾಯಣ್ ನೇತೃತ್ವದ ಚಳುವಳಿ ಕಾಲದಲ್ಲಿ ಕೆಲವು ಸಮಾಜವಾದಿಗಳು ರಾಷ್ಟ್ರಪತಿಗಳು ಇಂದಿರಾ ಗಾಂಧಿಯವರನ್ನು ವಜಾ ಮಾಡಬೇಕು ಎಂದು ಕೇಳಿದರೂ ಇಂದಿರಾ ಗಾಂಧಿ ಆಡಳಿತ ಅವಧಿಯನ್ನು ಪೂರೈಸಿದ್ದರು ಅವರ ನಂತರ ಅಧಿಕಾರ ವಹಿಸಿಕೊಂಡ ಜನತಾ ಪಕ್ಷ (ಬಿಜೆಪಿ ಮತ್ತು ಇಂದಿನ ಸಮಾಜವಾದೀ ತುಣುಕುಗಳು) ತಮ್ಮ ತಮ್ಮ ಯಾದವೀ ಕಲಹದಿಂದ ಅಧಿಕಾರ ಕಳೆದುಕೊಂಡವು. ಇಂದಿರಾ ಮತ್ತೆ ಅಧಿಕಾರಕ್ಕೆ ಬಂದು ತಮ್ಮ ಪೂರ್ಣಾವಧಿಯನ್ನು ಮುಗಿಸಿದರು. ಮುಂದೆ ಅಧಿಕಾರಕ್ಕೆ ಬಂದ ರಾಜೀವ್ ಕಾಲದಲ್ಲೂ ಅಂದಿನ ರಾಷ್ಟ್ರಪತಿ ಗ್ಯಾನಿ ಜೈಲ್ ಸಿಂಗ್ ರಾಜೀವರನ್ನು ಇಳಿಸಿ ಅಂದಿನ ಉಪರಾಷ್ಟ್ರಪತಿಗಳಾಗಿದ್ದ ಆರ್. ವೆಂಕಟರಾಮನ್ ಅವರನ್ನು ಪ್ರಧಾನಿಯಾಗಿ ಮಾಡಲು ಸಂಚು ಮಾಡಿದ್ದರು. ಆದರೆ ವೆಂಕಟರಾಮನ್ ಅವರು ಒಲ್ಲೆ ಎಂಬ ದೃಢ ನಿರ್ಧಾರದಿಂದಾಗಿ ಗ್ಯಾನಿಯವರ ಸಂಚು ವಿಫಲವಾಯಿತು. ರಾಜೀವ್ ಗಾಂಧಿಯವರು ಅವರ ಪೂರ್ಣಾವಧಿಯನ್ನು ಮುಗಿಸಲು ಸಾಧ್ಯವಾಯಿತು. ರಾಜೀವ್ ಗಾಂಧಿಯವರ ನಂತರ ವಿಶ್ವನಾಥ್ ಪ್ರತಾಪ್ ಸಿಂಗ್ ಒಂದು ಕಡೆ ಜನತಾ ಮೈನಸ್ ಬಿಜೆಪಿ, ಮತ್ತೊಂದು ಕಡೆ ಎಡಪಕ್ಷಗಳ ಬೆಂಬಲದಿಂದ ಅಧಿಕಾರಕ್ಕೆ ಬಂದರು. ಹಾಗೆಯೇ ಚಂದ್ರಶೇಖರ್‌ರವರ Treacheryಯಿಂದ ಅಧಿಕಾರ ಕಳೆದುಕೊಂಡರು. ಆಗಲೂ ರಾಷ್ಟ್ರಪತಿಗಳ ಮಧ್ಯ ಪ್ರವೇಶವಿರಲಿಲ್ಲ. ವಾಜಪೇಯಿಯವರು ಒಂದು ಬಾರಿ ಅಧಿಕಾರ ಕಳೆದುಕೊಂಡಿದ್ದು ಕ್ಷಣಪಿತ್ಥಂ, ಕ್ಷಣಚಿತ್ತಂ ಆದ ಜಯಲಲಿತಾ ಅವರ ಬದಲಾಗುತ್ತಿದ್ದ ಮನೋಭಾವದಿಂದ. ಆದರೆ ಮುಂದಿನ ಐದು ವರ್ಷಗಳ ಅವಧಿಯನ್ನು ಅವರು ಸುಲಲಿತವಾಗಿ ಪೂರೈಸಬಹುದಾಗಿತ್ತು. ಆದರೆ ಆರು ತಿಂಗಳ ಮೊದಲೇ ಚುನಾವಣೆಗಳನ್ನು ಕರೆದದ್ದರಿಂದ ಅಲ್ಲಿ ಸೋಲಬೇಕಾಯಿತು. ಮುಂದೆ ಅಧಿಕಾರಕ್ಕೆ ಬಂದ ದೇವೇಗೌಡ, ಗುಜ್ರಾಲ್ ತಲಾ ಹತ್ತು ಹತ್ತು ತಿಂಗಳಿನಲ್ಲಿ ಅಧಿಕಾರ ಕಳೆದುಕೊಂಡದ್ದರಿಂದ ನಿರ್ಗಮಿಸಬೇಕಾಯಿತು.

ಈಗ ಮನಮೋಹನ್ ಸಿಂಗ್ ಸೋನಿಯಾ ಬೆಂಬಲದಿಂದ ಎರಡನೆಯ ಅವಧಿಯನ್ನೂ ಪೂರೈಸಲಿದ್ದಾರೆ. ಅಂದರೆ ಕಳೆದ ಅರವತ್ತು ಚಿಲ್ಲರೆ ವರ್ಷಗಳಲ್ಲಿ ಪ್ರಧಾನಮಂತ್ರಿಗಳು ರಾಷ್ಟ್ರಪತಿಗಳಿಂದ ಯಾವುದೇ ಅಪಾಯ ಎದುರಿಸಿಲ್ಲ.

★★★★★

ಇದೇ ನಿಯಮ ರಾಜ್ಯಗಳಿಗೂ ಅನ್ವಯಿಸಿ ಮುಖ್ಯಮಂತ್ರಿಗಳು ಐದು ವರ್ಷಗಳನ್ನು ಪೂರೈಸಬೇಕು ಆದರೆ ಇದು ಆಗುತ್ತಿಲ್ಲ. ಇದಕ್ಕೆ ಕಾರಣಗಳು ಎರಡು. ಪಕ್ಷ ರಾಜಕೀಯದಲ್ಲಿ ಇನ್ನೂ ನಿರತರಾಗಿರುವವರನ್ನು ರಾಜ್ಯಪಾಲರನ್ನಾಗಿ ನೇಮಿಸುತ್ತಿರುವುದು ಮತ್ತು ಸಂವಿಧಾನದಲ್ಲೇ ಇರುವ 356 ಎಂಬ ಕುಖ್ಯಾತವಾಗಿರುವ ರಾಜ್ಯಾಂಗದ ಕಲಂ ಅನ್ನು ಇಂದಿರಾಗಾಂಧಿಯವರ ಕಾಲದಲ್ಲೇ ಕೇರಳದ ಇ.ಎಂ.ಎಸ್. ನಂಬೂದಿರಿ ಪಾದ್ ಅವರ ನೇತೃತ್ವದ ವಾಮಪಕ್ಷಗಳ ಸರ್ಕಾರವನ್ನು ಹಟಾಯಿಸಲಾಯಿತು. ಮುಂದೆ ಕರುಣಾನಿಧಿ ಈ ಕಲಂನ ರುಚಿಯನ್ನು ಎರಡು ಬಾರಿ ನೋಡಿದ್ದರು. ಆದರೆ ಅವರೇ ತಮ್ಮ ಕಡುವೈರಿ ಜಯಲಲಿತಾ ಅವರನ್ನು ಅವರ ಅಧಿಕಾರಾವಧಿಯನ್ನು ಮೊಟಕು ಮಾಡಲು ಕಾಂಗ್ರೆಸ್‌ನೊಂದಿಗೆ ಸಹಕರಿಸಿದ್ದರು. ಕೆಲವು ವಾರಗಳ ಹಿಂದೆ ಪತ್ರಿಕೆಗಳು ಕರ್ನಾಟಕದ ಬಿ.ಎಸ್.ವೈ. ಅವರನ್ನು ವಜಾ ಮಾಡಿ ರಾಷ್ಟ್ರಪತಿಗಳ ಆಳ್ವಿಕೆಯನ್ನು ಹೇರುವ ಪ್ರಯತ್ನ ನಡೆದಿದೆಯೆಂದು ವರದಿ ಮಾಡಿದ್ದವು. ಇದಕ್ಕೆ ಕೆಲವು ಕಾರಣಗಳನ್ನು ನಾವು ಊಹಿಸಿಕೊಳ್ಳಬಹುದು. ಬಿಹಾರದಲ್ಲಿ ನಿತೀಶ್ ಕುಮಾರ್ ಅವರಿಗೆ ಅವಕಾಶ ಕೊಡದಿದ್ದಕ್ಕಾಗಿ ಸುಪ್ರೀಂ ಕೋರ್ಟ್ ಅಲ್ಲಿನ ರಾಜ್ಯಪಾಲರಿಗೆ ಛೀಮಾರಿ ಹಾಕಿ ರಾಜ್ಯಪಾಲರ ನಿರ್ಧಾರ ಒಪ್ಪಿಕೊಂಡು ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡಿದ್ದಕ್ಕಾಗಿ ಕೇಂದ್ರ ಮಂತ್ರಿಮಂಡಲವನ್ನು ಟೀಕಿಸಿ ಆ ಶಿಫಾರಸ್ಸನ್ನು ಒಪ್ಪಿಕೊಂಡಿದ್ದಕ್ಕಾಗಿ ರಾಷ್ಟ್ರಪತಿಗಳನ್ನು ಟೀಕಿಸಿತ್ತು. ಈಚೆಗೆ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಹೆಚ್ಚು ಎಚ್ಚರ ವಹಿಸುತ್ತಿದೆ ಎನಿಸುತ್ತಿದೆ. ಒಂದು ಪಕ್ಷ ಕರ್ನಾಟಕ ಸರ್ಕಾರವನ್ನು ವಜಾ ಮಾಡಿದರೆ ಇದೇ ರೀತಿ ಬಂಗಾಳ ಮತ್ತು ಉತ್ತರ ಪ್ರದೇಶಗಳ ಸರ್ಕಾರಗಳನ್ನೂ ವಜಾ ಮಾಡುವಂತೆ ಮಮತಾ, ಮುಲಾಯಂ ಅವರ ಒತ್ತಡ ಸಹಿಸುವುದು ಕಷ್ಟವಾಗಬಹುದೆಂಬುದು ಇನ್ನೊಂದು ಕಾರಣವಿರಬಹುದು. ಇದಕ್ಕಿಂತ ಮುಖ್ಯವಾಗಿ ಇಲ್ಲಿ ಈಗ ಚುನಾವಣೆಗಳು ನಡೆದರೆ ಇಲ್ಲಿನ ಕಾಂಗ್ರೆಸ್ ನಾಯಕರುಗಳು ತಮ್ಮ ಪಕ್ಷಕ್ಕೆ ಜಯ ತಂದುಕೊಡುವ ಬಗ್ಗೆ ಕೇಂದ್ರ ನಾಯಕರಲ್ಲಿ ಅಪನಂಬಿಕೆ ಇನ್ನೂ ಮುಖ್ಯವಾದ ಕಾರಣವಿರಬೇಕು. ಏನಾದರಾಗಲಿ, ಬಿ.ಎಸ್.ವೈ.ಗೆ ತಾತ್ಕಾಲಿಕ ಶಮನ ಸಿಕ್ಕಿದೆ.

★★★★★

ಈಗಾಗಲೇ ಬ್ರಿಟಿಷ್ ಪೌಂಡ್, ಯೂರೋಪಿಯನ್ ಯೂರೋ ಮತ್ತು ಜಪಾನ್‌ನ ಯೆನ್‌ಗಳಿಗೆ ಕಂಪ್ಯೂಟರಿನಲ್ಲಿ ಪ್ರತ್ಯೇಕ ಚಿಹ್ನೆಗಳಿವೆ. ಈಚೆಗೆ ಮುಂಬೈಯ ಒಬ್ಬ ವಿದ್ಯಾರ್ಥಿ ರೂಪಿಸಿದ ದೇವನಾಗರೀ ಲಿಪಿಯ 'ರ' ಮತ್ತು ರೋಮನ್ ಲಿಪಿಯ 'ಆರ್' ಸಮ್ಮಿಶ್ರಣ ಈಗ ಇಂತಹುದೇ ಮಾನ್ಯತೆ ಪಡೆದಿದೆ. ಈಗಾಗಲೇ ಅನೇಕ ಪತ್ರಿಕೆಗಳು ಈ ಚಿಹ್ನೆಯನ್ನು ಬಳಸುತ್ತಿವೆ. ಕೆಲವು ರಾಷ್ಟ್ರೀಯ ವಾದಿಗಳು ಇದು ಭಾರತಕ್ಕೆ ಸಿಕ್ಕ ಅಪೂರ್ವ ಮನ್ನಣೆಯೆಂದು ಸಂತೋಷಿಸುತ್ತಿದ್ದಾರೆ. ಇನ್ನು ಕೆಲವು ನಿರಾಶಾವಾದಿಗಳು ಕೆಲವು ವರ್ಷಗಳಿಂದ ಇರುವ ಸತತ ಬೆಲೆಯೇರಿಕೆಯಿಂದ ಶ್ರೀಸಾಮಾನ್ಯನ ರೂಪಾಯಿ ಬಳಸುವ ಸಾಮರ್ಥ್ಯ ಕುಗ್ಗುತ್ತಿದೆ. ಇಂತಹ ಪರಿಸ್ಥಿಯಲ್ಲಿ ಇದು ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮೈಸೂರು ಮಲ್ಲಿಗೆ ದಂಡೆ ಎಂದು ವ್ಯಂಗ್ಯವಾಡುತ್ತಿದ್ದಾರೆ.

- ಕು.ಕ.

ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಆ

- ಹೀಗೂ ಉಂಟೆ? ಉತ್ತರ ಥಟ್ ಅಂತ ಹೇಳಿ.
- ತಂಬಾಕು ಅಗೆಯುತ್ತಿರುವವನ ಮೇಲೆ ಕೈ ಮಾಡದಿರುವುದೇ ಕ್ಷೇಮ.
- We should never underestimate the intelligence of the corrupt.
- ಜೀವನ ಎಂದರೆ ನೀವು ಏನೋ ಯೋಜನೆ ಹಾಕುತ್ತಿರುವಾಗ ಇನ್ನೇನೋ ಘಟಿಸುವುದು.
- ನೀನು ನನ್ನನ್ನು ತೆಗೆಯುವ ಮೊದಲೇ ನಾನು ರಾಜೀನಾಮೆ ಕೊಡುತ್ತಿದ್ದೇನೆ ಎಂದು ದೇವರಿಗೆ ಹೇಳುವುದನ್ನು ಆತ್ಮಹತ್ಯೆ ಎಂದು ಕರೆಯುತ್ತಾರೆ.
- God is the only thing that exists without existence.

ಮೆಲುಕು ಹಾಕುವಂತಹ ಮಾತುಗಳ ಗುಚ್ಛ

- ನನ್ನ ಬಳಿ ಸಾಕಷ್ಟಿದೆ ಎಂಬ ಭಾವನೆ ಬಂದಾಗ ನೀವು ಶ್ರೀಮಂತರಾಗಿರುತ್ತೀರಿ.
- 1980-ತಲೆ ತುಂಬಾ ಕೂದಲು
  2010-ತಲೆ ತುಂಬಾ ಕೂದಲಿದ್ದಿದ್ದರೆ ! ಎಂದು ಹಂಬಲಿಸುವುದು.
- Stardom begins and ends on Fridays.
- ನೆರಳು ಕಂಡಾಗ ಭಯ ಪಡದಿರಿ. ಹತ್ತಿರದಲ್ಲೆಲ್ಲೋ ಪ್ರಖರ ಬೆಳಕಿದೆ ಎಂಬುದರ ಸೂಚನೆ ಅದು.
- ತೀರಾ ಬಳಲಿದ್ದಾಗ ನಾನು ಒಂದು ಪ್ರಶ್ನಾರ್ಥಕ ಚಿಹ್ನೆಯಂತೆ ಕಾಣುತ್ತೇನೆ. ಒಂದೆರಡು ಪೆಗ್ ಹಾಕುತ್ತಾ ಎರಡು ಮೂರು ತಾಸು ವಿಶ್ರಾಂತಿ ಪಡೆದ ಮೇಲೆ ನಾನೊಂದು ಆಶ್ಚರ್ಯ ಚಿಹ್ನೆ ಆಗುತ್ತೇನೆ !
- Today is the tomorrow what we were so concerned about yesterday.
- ಸರಸ್ವತಿ ಆರಾಧಕರ ಮನೆಯ ಮೆಟ್ಟಿಲು ದಾಟಿ ಒಳಗೆ ಬರುವ ಸಾಹಸ ಲಕ್ಷ್ಮಿಗೆ ಇಲ್ಲವೇ ಇಲ್ಲ.
- ಮದುವೆಯಾದ ಮೇಲೆ ಗಂಡ ಹೆಂಡತಿ ಒಂದೇ ನಾಣ್ಯದ ಎರಡು ಮುಖಗಳಂತಾಗುತ್ತಾರೆ. ಒಬ್ಬರೊನ್ನಬ್ಬರು ನೋಡಲು ಬಯಸದಿದ್ದರೂ ಒಟ್ಟಿಗೇ ಇರುತ್ತಾರೆ.

ಬಾಬಮ್ಮಾ ಕೀ ಪ್ರೇಮ್ ಕಹಾನಿ...

- ಗುರು

ಪುರೋಹಿತರ ಬಂಡೆ ವಿಷಯದ ನಂತರ ನಿಮಗೆ ಹೇಳಬೇಕಾಗಿರುವುದು ಕಾರ್ಖಾನೆಗಳಲ್ಲಿ ನಡೆಯುವ ಪ್ರೇಮ ವಿವಾಹಗಳನ್ನು ಕುರಿತು! ಇದು ನಾನೂ ಸೇರಿದ ಹಾಗೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಎಲ್ಲರಿಗೂ ಒಂದು ರೀತಿಯಲ್ಲಿ ಖುಷಿ ನೀಡುತ್ತಿದ್ದ ಸಂಗತಿ ಆಗ. ನಿಮ್ಮಲ್ಲಿ ಅಷ್ಟೊಂದು ಜನ ಲೇಡಿ ಎಂಪ್ಲಾಯೀಸು ಇದಾರೆ ಯಾಕೆ ನೀನು ಲವ್ ಮ್ಯಾರೇಜು ಮಾಡಿಕೊಂಡಿಲ್ಲ ಅಂತ ಸುಮಾರು ಜನ ನನ್ನ ನೆಂಟರು ಮತ್ತು ಕಾರ್ಖಾನೆ ಅನುಭವವಿಲ್ಲದ ಸ್ನೇಹಿತರು ನನ್ನನ್ನು ನನ್ನ ಮದುವೆಗೆ ಮೊದಲು ಕುತೂಹಲದಿಂದ ವಿಚಾರಿಸುತ್ತಿದ್ದರು. ಒಂದು ಹುಡುಗ ಹುಡುಗಿ ಸೇರಿದರು ಅಂದರೆ ಲವ್ ಹುಟ್ಟುತ್ತೆ ಅಂತ ಅವರು ತಿಳಿದುಕೊಂಡಿದಾರೆ ಅಂತ ನನಗೆ ಅನಿಸುತ್ತಿತ್ತು. ಅಲ್ಲದೇ ಲವ್ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ ಅಂತ ನಾನು ತಮಾಷೆಯಾಗಿಯೇ ಹೇಳುತ್ತಿದ್ದೆ. ಲವ್ ಮಾಡುವುದಕ್ಕೂ ಧೈರ್ಯ ಬೇಕಿರುತ್ತೆ - ಎಲ್ಲರ ಕೈಲೂ ಅದು ಆಗುವ ಕೆಲಸವಲ್ಲ ಅನ್ನುವುದು ನಾನು ನೀಡುತ್ತಿದ್ದ ಉತ್ತರ.

ಹಾಗೆ ನೋಡಿದರೆ ಪ್ರೀತಿಸಿ ಮದುವೆಯಾದ ಸುಮಾರು ಜನ ಕೊಲೀಗುಗಳು ನನ್ನ ಜತೆಯಲ್ಲಿಯೇ ಇದ್ದರು. ಕೆಲವರದ್ದು ಅನುರೂಪದ ಜೋಡಿ ಎನಿಸಿದರೂ ಮತ್ತೆ ಕೆಲವರದ್ದು ಲವ್ ಹೀಗೆ ಅನುರೂಪವಿಲ್ಲದ ಚೇಷ್ಟೆಗಳನ್ನೂ ಮಾಡುತ್ತದೆಯೇ ಅನಿಸುವ ಹಾಗೆ ಇದ್ದವು! ಪೂರ್ತಿ ಬಾಲ್ಡ್ ಆಗಿರುವ ಹುಡುಗನಿಗೆ ತಲೆತುಂಬ ಕೂದಲು ಅದೂ ಮಂಡಿಯವರೆಗೆ ಬೆಳೆದಿರುವಂತಹ ಜಡೆ ಇರುವ ಹುಡುಗಿ ಮದುವೆಯಾಗಿದ್ದಳು. ಮೂರೂವರೆ ಅಡಿ ಉದ್ದದ ಶ್ಯಾಮಲನ ಗಂಡ ಆರೂ ಕಾಲು ಅಡಿ ಇದ್ದ! ಇನ್ನೂ ತಮಾಷೆ ಅನಿಸಿದ್ದು ಕೆಂಪಗೆ ಮಿರ ಮಿರ ಮಿಂಚುತ್ತಿದ್ದ ಶ್ಯಾಮಸುಂದರನ ಹೆಂಡತಿ ಕೆಂಡಕ್ಕೆ ಸ್ನಾನ ಮಾಡಿಸಿದ ಹಾಗೆ ಇದ್ದಳು. ಚಿಕ್ಕ ವಯಸ್ಸಿಗೇ ತಲೆ ಪೂರ್ಣವಾಗಿ ಬೆಳ್ಳಿಯಾಗಿದ್ದ ಹುಡುಗಿಗೂ ಒಬ್ಬ ಪ್ರೇಮಿ ಇದ್ದ. ಪ್ರೀತಿಗೆ ಕಣ್ಣಿಲ್ಲ ಎನ್ನುವ ಹಳೇ ಮಾತಿಗೆ ನಾವೂ ತಲೆಯಾಡಿಸಲೇಬೇಕು ಹಾಗೆ ಕೆಲವು ಜೋಡಿಗಳು ಕಣ್ಣು ಕುಕ್ಕುತ್ತಿದ್ದವು.

ಆಗ ನಮ್ಮಲ್ಲಿ ಇನ್ನೂ ಯೂನಿಫಾರ್ಮಿನ ಅಳವಡಿಕೆ ಆಗಿರಲಿಲ್ಲ. ನಮ್ಮದೇ ದುಡ್ಡಿನಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಆಕರ್ಷಕ ಬಟ್ಟೆಗಳನ್ನು ತೊಟ್ಟು ಬರುತ್ತಿದ್ದೆವು. ಗಂಡಸರಿಗೆ ಬಟ್ಟೆಗಳ ಮೇಲೆ ಅಂತಹ ಅಪರೂಪದ ಮೋಹವಿರಲಿಲ್ಲ. ಯಾವುದೋ ಷರಟು ಅದಕ್ಕೆ ಒಂದು ಪ್ಯಾಂಟು, ಕೆಲವರು ಷರಟನ್ನು ಪ್ಯಾಂಟಿನ ಒಳಗೆ ತೂರಿಸಿಕೊಂಡು ಬಂದರೆ ಮತ್ತೆ ಕೆಲವರು ಷರಟನ್ನು ಮೇಲೆ ಹಾಕಿಕೊಂಡು ಬರುತ್ತಿದ್ದರು. ಷರಟು ಒಳಗೆ ತೂರಿಸಿಕೊಂಡು ಇಂತಹವರು

ಬಂದವರೆ ನಮಗೊಂದು ಸಿಗ್ನಲ್ - ಈತ ಪ್ರೇಮದಲ್ಲಿ ಸಿಲುಕಿದ್ದಾನೆ ಅಂತ! ಗಾಢವಾದ ಬಣ್ಣದ ಬಟ್ಟೆ ತೊಟ್ಟು ಬಂದವರಂತೂ ಅದು ಪ್ರೇಮದ ತೀವ್ರತೆಯ ಸಂಕೇತ. ಮದುವೆಯಾಗಿಲ್ಲದ ಹುಡುಗಿಯರು ಆಗ ಕಾರ್ಖಾನೆಗೆ ಬರುತ್ತಿದ್ದ ರೀತಿಯೂ ಬಹಳ ತಮಾಷೆಯಾಗಿರುತ್ತಿತ್ತು. ಎರಡು-ಮೂರು ಹುಡುಗಿಯರು ಒಂದೇ ತರಹದ ಸೀರೆ ಧರಿಸುವುದು, ಅದೇ ತರಹದ ಬ್ಯಾಕ್ ಬಟನ್ ಬ್ಲೌಸು ತೊಡುವುದು, ಅದೇ ರೀತಿಯ ಚಪ್ಪಲಿ ಹಾಕುವುದು ಮತ್ತು ಕೆಲವು ಸಾರಿ ಒಂದೇ ಬಣ್ಣದ ಲಿಪ್‌ಸ್ಟಿಕ್ ಹಾಕಿಕೊಂಡು ಒಂದೇ ರೀತಿ ನಡೆಯುವುದು ಒಂದೇ ರೀತಿ ನಗುವುದು... ಇವು ಸಹಜವಾಗಿತ್ತು. ಅದರಲ್ಲೂ ತಮಾಷೆಯೆನಿಸುತ್ತಿದುದು ಈ ರೀತಿಯ ಗೆಳತಿಯರನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ ಅವರು ಅನುಸರಿಸುತ್ತಿದ್ದ ರೀತಿ. ಸುಮಾರು ಒಂದೇ ದಪ್ಪವಿರುವವರು ಬೇಗ ಗೆಳೆತನ ಬೆಳೆಸುತ್ತಿದ್ದರು. ಆದರಿಂದ ನೀವು ಗುಂಪಿನಲ್ಲಿ ಒಂದು ಹುಡುಗಿಯನ್ನು ಗಮನಿಸಿದರೆ ಸಾಕು ಮಿಕ್ಕವರೂ ಅದೇ ಗಾತ್ರ, ಅದೇ ಅಗಲ ಮತ್ತು ಅದೇ ಬಣ್ಣದವರು ಎಂದು ಕಣ್ಣುಮುಚ್ಚಿ ಹೇಳಬಹುದು! ಆಗಿನ ನಮ್ಮ ಪಡ್ಡೆ ವಯಸ್ಸಿಗೆ ತಕ್ಕ ಹಾಗೆ ಈ ತರಹದ ಒಂದು ಗುಂಪಿಗೆ ನನ್ನ ಸ್ನೇಹಿತ 100,120,160 ಎಂದು ಹೆಸರಿಟ್ಟಿದ್ದ. ಅದು ಹುಡುಗಿಯರ ಸುತ್ತಳತೆ ಮೇಲೆ ಇಟ್ಟಿದ್ದ ಗೂಢನಾಮಗಳು. ಗಂಡುಗಳ ತಮಾಷೆ ಈ ಹುಡುಗಿಯರ ಬಗ್ಗೆ ಸ್ವಲ್ಪ ಬೇಜವಾಬ್ದಾರಿತನದ್ದು ಆಗಿರುತ್ತಿತ್ತು. ಒಂದೇ ರೀತಿಯ ಬಟ್ಟೆ ತೊಡುವ ಈ ಮೂರೂ ಜನ ಹುಡುಗಿಯರು ಒಂದೇ ಗಂಡಸನ್ನ ಮದುವೆಯಾಗ್ತಾರಾ? ಅಂತ ಒಂದು ಜೋಕನ್ನು ಕೆಲವರು ಕಟ್ ಮಾಡಿದ್ದೂ ನನಗೆ ನೆನಪು!

ಈ ಪ್ರೇಮಪಾಶಗಳ ಆಕರ್ಷಣೆ ಏನಿರುತ್ತೆ ಎನ್ನುವುದು ಬಹಳ ವರ್ಷಗಳು ನನ್ನನ್ನು ಕಾಡಿದ ಸಮಸ್ಯೆ. ಪಳಗಿದಂತೆ ನಾನು ತಿಳಿದುಕೊಂಡಿದ್ದು - ಬೌದ್ಧಿಕ ಆಕರ್ಷಣೆಗಳಿಗಿಂತಲೂ ದೈಹಿಕ ಆಕರ್ಷಣೆಗಳೇ ಆ ವಯಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದು. ಇದಕ್ಕೆ ಕಾರಣವೆಂದರೆ ಆಗ ಪ್ರೇಮಿಸಿ ಮದುವೆಯಾದವರಲ್ಲಿ ಸುಮಾರು ಜನರು ವಿದ್ಯೆ ಅಷ್ಟೇನೂ ಇಲ್ಲದವರು ಮತ್ತು ತಮಗೆ ಏನು ಬೇಕು ಏನು ಬೇಡ ಎಂದು ತಿಳಿದುಕೊಳ್ಳುವ ಮಾನಸಿಕ ಸಿದ್ಧತೆಯೂ ಇಲ್ಲದವರು. ಆಕರ್ಷಣೆಗೆ ಒಳಗಾಗುವ ವಯಸ್ಸು ಅದು ಮತ್ತು ಹೆಚ್ಚಿನ ವಿದ್ಯೆ ಇಲ್ಲವಾದ್ದರಿಂದ ಹೆಚ್ಚು ಯೋಚಿಸುವ ಹಂತವನ್ನೂ ತಲುಪಿರಲಿಲ್ಲ. ಇದನ್ನು ನನ್ನ ಕೆಲವು ಗೆಳೆಯರಲ್ಲಿ ಹಂಚಿಕೊಂಡಾಗ ಅವರ ಸಹಮತವೂ ಈ ಯೋಚನೆಗೆ ಇಂಬು ಕೊಟ್ಟಿತು. ಮಿಕ್ಕವರಿಗೆ ಹೋಲಿಸಿದರೆ ನಾವು ತುಸು ಹೆಚ್ಚು ಓದಿಕೊಂಡವರಾಗಿದ್ದ ಕಾರಣವೋ ಏನೋ ನಮ್ಮಲ್ಲಿ ಯಾರೂ ಕಾರ್ಖಾನೆಯಲ್ಲಿ ಪ್ರೇಮಕ್ಕೆ ಸಿಕ್ಕಿಕೊಂಡಿರಲಿಲ್ಲ. ಕೆಲವು ಸ್ನೇಹಿತರು ತಮ್ಮ ಓದು ಮುಂದುವರಿಸಲು ಕೆಲಸಕ್ಕೆ ಸೇರಿದ ನಂತರ ಸ್ನಾತಕೋತ್ತರ ಕಾಲೇಜಿಗೆ ಸೇರಿದ್ದರು. ಅವರಲ್ಲಿ ಕೆಲವರು ಲವ್‌ಗೆ ಒಳಗಾದರು - ಆದರೆ ಇವರದ್ದು ಬರೀ ಬೌದ್ಧಿಕ ಆಯಾಮ ಎಂದು ನಾವು ಪ್ರೀತಿ ಪ್ರೇಮದಿಂದ ದೂರವಿದ್ದವರು ಅಂದುಕೊಂಡಿದ್ದರೂ ಇರಬಹುದು! ಈ ರೀತಿಯ ಯೋಚನೆಗಳು ನಮ್ಮನ್ನು ಆಗಿನ ಮುಖ್ಯ ವಾಹಿನಿಯಿಂದ ದೂರವಿಟ್ಟಿರಬಹುದೇ

ಎಂದು ಈಗ ಅನಿಸುತ್ತೆ. ಅದರಲ್ಲೂ ತಮಾಷೆ ಎಂದರೆ ಕಾರ್ಖಾನೆಯಲ್ಲಿ ದೇಶದ ಎಲ್ಲಾ ಭಾಗಗಳಿಂದ ಬಂದ ಜನರೂ ಇದ್ದರು. ಅವರವರ ಜಾತಿ ಬೇರೆಯವು, ಅವರ ಸಂಪ್ರದಾಯಗಳೂ ವಿಭಿನ್ನವಾದವು ಮತ್ತು ಅವರು ಬೆಳೆದು ಬಂದ ಪರಿಸರವೇ ಬೇರೆಯವು. ಆದರೂ ಪ್ರೇಮ ಇವೆಲ್ಲವನ್ನೂ ಮೀರಿ ನಿಂತಿದ್ದೇ ಅಲ್ಲದೇ ಬೇರೆ ಬೇರೆ ಭಾಷೆಗಳ, ಬೇರೆ ಬೇರೆ ಪರಿಸರದ, ಬೇರೆ ಬೇರೆ ಜಾತಿಯ ಗಂಡು ಹೆಣ್ಣುಗಳನ್ನು ಒಂದು ಮಾಡಿತ್ತು. ಬಹುಶಃ ನಮ್ಮ ಕಾರ್ಖಾನೆಯಲ್ಲಿ ಈ ಲೆಕ್ಕದಲ್ಲಿ ಸಾಧ್ಯವಾದ ಅಂತರಭಾಷಾ, ಅಂತರಜಾತೀಯ ವಿವಾಹಗಳು ಬೇರೆ ಇನ್ನು ಯಾವ ಉದ್ದಿಮೆಯಲ್ಲಿಯೂ ಆಗಿರಲಾರದು ಎಂದು ನನ್ನ ಅನಿಸಿಕೆ.

ಮೊನ್ನೆ ತುಂಬಾ ವರ್ಷಗಳ ನಂತರ ಈ ಬಗ್ಗೆ ನನ್ನ ಯೋಚನೆಯನ್ನು ನನ್ನ ಗೆಳೆಯರೊಬ್ಬರಲ್ಲಿ ಹರಿದುಬಿಟ್ಟೆ. ಅವರು ಎರಡು ನಿಮಿಷ ಯೋಚಿಸಿ ಹೌದಲ್ಲವಾ? ರಾಷ್ಟ್ರೀಯ ಭಾವೈಕ್ಯತೆಗೆ ನಮ್ಮ ಕೊಡುಗೆ ಏನೂಂತ ಯಾರಾದರೂ ಒಂದು ಥೀಸೀಸ್ ಬರೆಯಬಹುದು ಎಂದರು! ಇದೇ ಸಮಯದಲ್ಲಿ ಒಂದು ಪ್ರಸಂಗ ನನ್ನ ನೆನಪಿಗೆ ಒತ್ತುಕೊಂಡು ಬರುತ್ತೆ.

ಪೂಬಾಲನ್ ಎನ್ನುವ ಹೆಸರಿನ ಮಿಲಿಟರಿಯಿಂದ ನಿವೃತ್ತನಾಗಿ ಕೆಲಸಕ್ಕೆ ಸೇರಿದ ಒಬ್ಬರಿದ್ದರು. ತಮಿಳು ಮಾತೃಭಾಷೆಯವರು. ಪ್ರತಿಯೊಂದನ್ನೂ ಅಳೆದು ಸುರಿದು ನಿಖರತೆಯನ್ನು ಕಾಪಾಡಲು ಶ್ರಮಿಸುವ ವ್ಯಕ್ತಿ ಇವರು. ಮಿಲಿಟರಿಯಿಂದ ಹೊರಬಂದ ನಂತರ ವ್ಯಾಯಾಮದ ಕಡೆಗೆ ಗಮನ ಹರಿಸಿರಲಿಲ್ಲವಾದ್ದರಿಂದ ದೇಹದ ಎಲ್ಲಾ ಭಾಗಗಳೂ ಅಡೆ ತಡೆಯಿಲ್ಲದೇ ಬೆಳೆದಿದ್ದವು. ನಾನು ಕೆಲಸಕ್ಕೆ ಸೇರುವ ವೇಳೆಗಾಗಲೇ ಇವರಿಗೆ ಮದುವೆಯಾಗಿ ಎರಡು ಮಕ್ಕಳೂ ಇದ್ದವು. ಅವರ ಹೆಂಡತಿಯೂ ನಮ್ಮ ಕಾರ್ಖಾನೆಯಲ್ಲಿಯೇ ಕೆಲಸದಲ್ಲಿದ್ದಾರೆ ಅಂತ ಯಾರೋ ಹೇಳಿದ್ದರು. ಒಮ್ಮೆ ಅವರ ಮನೆಗೆ ಹೋಗುವ ಪ್ರಸಂಗ ಎದುರಾಯಿತು. ಅವರ ಮನೆ ಸೇರಿದೆ. ಲೂಸೀ ಅಂತ ಅವರು ತಮ್ಮ ಹೆಂಡತಿಯನ್ನ ಕರೆದರು. ಒಳಗಿನಿಂದ ಲೂಸಿ ಆಚೆ ಬಂದರು. ಪೂಬಾಲನ್ ನೂರಾ ಇಪ್ಪತ್ತು ಕೇಜಿ ತೂಗುತ್ತಿದ್ದ ಮನುಷ್ಯ – ಸ್ಕರ್ಟ್ ತೊಟ್ಟು ಆಚೆ ಬಂದ ಲೂಸಿ ನೂರಾ ಮೂವತ್ತು ಕೇಜಿ ಇರಬಹುದೇನೋ! ಪೂಬಾಲನ್ ಎನ್ನಾ ಚಾರ್ ಎಪ್ಪಡಿ? ಅಂದ! ಎದ್ದು ನಿಂತು ಹ್ಯಾಟ್ಸ್ ಆಫ್ ಮಾಡಿದೆ. ಆ ಮೇಲೆ ಪೂಬಾಲನ್ ಅವರು ಅವರ ಮದುವೆಯ ಕಥೆಯನ್ನ ವಿವರಿಸಿದ್ದು ಹೀಗೆ: ತ್ರೀ ವೀಕ್ಸ್ ಚರ್ಚ್‌ಗೆ ಹೋದೆ – ತ್ರೀ ವೀಕ್ಸ್ ಲೂಸಿ ಕೂಡ ಚರ್ಚ್‌ಗೆ ಬಂದಿದ್ದಳು. ವಿ ಡೆವಲಪಡ್ ಲವ್ ಅಂಡ್ ವಿ ಮ್ಯಾರೀಡ್. ಮೇಡ್ ಫಾರ್ ಈಚ್ ಅದರ್ ಪೇರ್! ಇವತ್ತಿಗೂ ಆಗಾಗ ಈ ಮೇಡ್ ಫಾರ್ ಈಚ್ ಅದರ್ ಪೇರ್ ಕಣ್ಣ ಮುಂದೆ ಬರುತ್ತೆ.

ಮತ್ತೊಂದು ಲವ್ ಸ್ಟೋರಿ ನಿಮಗೆ ಹೇಳಲಾ?

ಶಿಫ್ಟಿನಲ್ಲಿ ನಾವು ಕೆಲಸಕ್ಕೆ ಬಂದು ಹೋಗುತ್ತಿದುದು. ಜನರಲ್ ಶಿಫ್ಟಿನಲ್ಲಿ ಹುಡುಗಿಯರು ಹೆಚ್ಚು ಬರುತ್ತಿದ್ದರು. ಏಳು ಮುಕ್ಕಾಲರಿಂದ ಸಂಜೆ ನಾಲ್ಕೂವರೆವರೆಗೆ ಇವರ ಶಿಫ್ಟಿನ ವೇಳೆ.

ಸುಮಾರು ಹುಡುಗರೂ ಅದೇ ಶಿಫ್ಟು. ನಮ್ಮ ಜತೆ ಕೆಲಸಕ್ಕೆ ಸೇರಿದ ಒಬ್ಬರು ಹೀಗೆ ಜನರಲ್ ಶಿಫ್ಟಿನಲ್ಲಿ ಬರುತ್ತಿದ್ದರು ಮತ್ತು ಒಂದು ದಿವಸ ಅವರನ್ನು ನೋಡಿ ನಮ್ಮ ಕಾರ್ಖಾನೆಯಲ್ಲಿಯೇ ಕೆಲಸ ಮಾಡುತ್ತಿದ್ದ ಒಂದು ಹುಡುಗಿ ನಸುನಕ್ಕಳು. ಲವ್ ಅಟ್ ಫಸ್ಟ್ ಸೈಟ್ ಆಯಿತು ಇವರಿಗೆ. ಮೊದಲೇ ಬಂದು ಕಾರ್ಖಾನೆ ಬಸ್ ಸ್ಟಾಪಿನಲ್ಲಿ ಇವರು ಕಾದರು. ಸಂಜೆ ಕೆಲಸ ಮುಗಿದ ಕೂಡಲೇ ಹುಡುಗಿಯೂ ಬಂದಿತು. ಅವಳು ಹತ್ತಿದ ಬಸ್ಸನ್ನೇ ಇವರೂ ಹತ್ತಿದರು. ನಿದ್ದೆಯನ್ನು ಹತ್ತಿಕ್ಕಿ (ಕಾರ್ಖಾನೆ ಬಸ್ಸಿನಲ್ಲಿ ನಿದ್ದೆಯನ್ನೇ ಕುರಿತು ಮತ್ತೊಮ್ಮೆ ತಮಗೆ ವಿವರಿಸುತ್ತೇನೆ) ಆಕೆ ಇಳಿಯುವ ಸ್ಟಾಪನ್ನು ಇವರು ಕಾದರು. ಆಕೆ ಇಳಿದ ನಂತರ ಆಕೆಯ ಹಿಂದೆಯೇ ಹೆಜ್ಜೆಯನ್ನೂ ಹಾಕಿದರು. ಒಂದೆರೆಡು ಬಾರಿ ತಿರುಗಿ ಇವರನ್ನು ನೋಡಿದ ಆ ಹುಡುಗಿ ನಸುನಗೆಯನ್ನು ಪುನರಾವರ್ತಿಸಿದಳು. ಇವರು ಹತ್ತಿರ ಹೋಗಿ ಮಾತನಾಡಿಸಬೇಕೆನ್ನುವಷ್ಟರಲ್ಲಿ ಯಾವುದೋ ಮನೆಯ ಒಳಹೊಕ್ಕು ಹುಡುಗಿ ಮನೆ ಸೇರಿ ಬಾಗಿಲು ಹಾಕಿಕೊಂಡಳು. ಇವರು ಅರ್ಧ ಗಂಟೆ ಕಾದರು, ಬಾಗಿಲು ತೆರೆಯಲಿಲ್ಲ. ವಾಪಸು ಬಂದರು. ಮಾರನೇ ದಿವಸ ಈ ಪ್ರಸಂಗವನ್ನು ನಮಗೆ ವಿವರಿಸಿದರು. ಮತ್ತೆ ಆ ಕಡೆ ಹೋಗಬೇಡಿ, ಮನೇಲಿ ಅಣ್ಣನಿಗೋ ತಮ್ಮನಿಗೋ ಹೇಳಿ ನಿಮಗೆ ಚಮಡಾ ನಿಕಾಲ್ ಮಾಡಿಸಿಬಿಡ್ತಾಳೆ ಹುಡುಗಿ ಅಂತ ಗೆಳೆಯರಲ್ಲಿ ಒಬ್ಬ ಸಲಹೆ ನೀಡಿದ. ಹುಡುಗಿ ನಕ್ಕಿದಾಳೆ ಅಂದರೆ ಅವಳಿಗೆ ನೀವು ಮೆಚ್ಚುಗೆಯಾಗಿದೀರಿ, ಮತ್ತೆ ಆಕೆ ಹಿಂದೆ ಹೋಗಿ, ಅವರ ಮನೆ ಒಳಗೂ ಹೋಗಿ, ನಿಮ್ಮ ಪ್ರೇಮ ನಿವೇದಿಸಿಕೊಳ್ಳಿ, ಮದುವೆಯನ್ನೂ ಆಗಿ ಸುಖವಾಗಿರಿ - ಇದು ನಾನು ಕೊಟ್ಟ ಸಲಹೆ. ಸ್ನೇಹಿತರು ಸುಮಾರು ದಿವಸ ಈ ಬಗ್ಗೆ ಚಿಂತಿಸಿ ಮೊದಲನೇ ಸಲಹೆಯನ್ನು ಒಪ್ಪಿದರು! ಹುಡುಗಿ ಬೆಳ್ಳಗೆ ಸಪೂರವಾಗಿ ಆಗಿನ ಕಾಲದ ಸಾಯಿರಾಬಾನು ಹಾಗಿದ್ದಳು, ತಲೆ ಕೂದಲು ಬಾಬ್ ಮಾಡಿಸಿಕೊಂಡಿದ್ದಳು. ನೋಡಿದ ಕೂಡಲೇ ರೂಪವತಿ ಎಂದು ಹೇಳಬಹುದಾಗಿದ್ದಳು. ಅವಳ ಹೆಸರು ಗೊತ್ತಿಲ್ಲದ್ದರಿಂದ ನಾವು ಆಕೆಯನ್ನ ಬಾಬಮ್ಮ ಅಂತ ಹೆಸರಿಟ್ಟಿದ್ದೆವು. ಕೊನೆಗೂ ನಮ್ಮ ಗೆಳೆಯ ಆಕೆಯನ್ನು ಮಾತನಾಡಿಸಲೇ ಇಲ್ಲ! ಒಂದು ಅಭೂತಪೂರ್ವ ಪ್ರೇಮದ ಕತೆ ಹೀಗೆ ಪರ್ಯಾಯವಸಾನವಾಯಿತು ಆಗ! ಮುಂದೆ ಸುಮಾರು ವರ್ಷ ನಮಗೆ ಈ ಕತೆ ಒಂದು ತಮಾಷೆಯ ವಸ್ತುವಾಗಿ ಹರಡಿತ್ತು! ಆ ಹುಡುಗಿ ಮೊನ್ನೆ ಮೊನ್ನೆ ನಿವೃತ್ತಳಾದಾಗ ಅವಳಿಗೆ ಈ ಪ್ರಸಂಗ ಹೇಳಿದೆ - ಈ ಸಮಯಕ್ಕೆ ನನಗೆ ಅವಳ ಪರಿಚಯ ಆಗಿತ್ತು ಮತ್ತು ನಿಕಟತೆಯೂ ಬೆಳೆದಿತ್ತು. ಹುಡುಗಿ ಕಟ್ಟಿಸಿಕೊಂಡ ಹಲ್ಲು ಕಳಚಿ ಬೀಳುವ ಹಾಗೆ ನಕ್ಕಳು! ಈ ತರಹದ ಕತೆಗಳು (ಸುಮಾರು ಕೇಳಿದ್ದರಿಂದ ನೋಡಿದ್ದರಿಂದ - ಅನುಭವಿಸಿದ್ದು ಇಲ್ಲ) ನನ್ನ ತಲೆಯ ತುಂಬಾ ತುಂಬಿಹೋಗಿವೆ.

ನಮ್ಮ ಕಾರ್ಖಾನೆಯಲ್ಲಿನ ಪ್ರೇಮಕಥೆಗಳ ಬಗ್ಗೆ ಒಂದು ಅಥಾರಿಟಿ ನಾನು ಎಂದು ಸುಮಾರು ಸಲ ಬೀಗಿದ್ದೇನೆ.

✲

ಫ್ಲೆಕ್ಸಿ ಬೋರ್ಡ್ ಎಂಬ ಹೊಸ ಮಾಧ್ಯಮ

- ಆನಂದ

ಇತ್ತೀಚೆಗೆ ನನ್ನ ಸಾಮಾನ್ಯ ಜ್ಞಾನ - ಅಂದರೆ ಜೆನರಲ್ ನಾಲೆಡ್ಜ್ - ಸುಧಾರಿಸಲಿಕ್ಕೆ ಹತ್ತಿದೆ. ಯಡ್ಯೂರಪ್ಪನವರ ಫೇವರೆಟ್ ಶಾಸಕ ಸೋಮಣ್ಣ ಅವರಿಗೆ 60 ವರ್ಷ ತುಂಬಿದೆ ಎಂದು ನನಗೆ ಗೊತ್ತೇ ಇರಲಿಲ್ಲ. ಅವರ ಚಿತ್ರಗಳನ್ನು ನೋಡಿದಾಗ ಅವರಿಗೆ 40-45 ವರ್ಷ ಎಂದುಕೊಂಡಿದ್ದೆ. ಆದರೆ ಅವರು ಷಷ್ಟ್ಯಬ್ದಿ ಆಚರಿಸಿಕೊಂಡಿದ್ದರು. ಏನಿರಬಹುದು ಅವರ ಆರೋಗ್ಯದ ಗುಟ್ಟು? ಒಬ್ಬ ರಾಜಕೀಯ ನಾಯಕ 60 ತುಂಬಿದರೂ 45ರಂತೆ ಕಾಣುತ್ತಾರೆ ಎಂದರೆ!

ಹಾಗೆಯೇ, ನನಗೆ ನಡಿಗೆಯ ಧೀರ ಸಿದ್ಧರಾಮಯ್ಯ, ಟೋಪಿಧಾರಿ ಕಟ್ಟಾ, ಎಸ್. ನಾಯ್ಡು ಮುಂತಾದವರ ವಯಸ್ಸು ತಿಳಿದಿದ್ದೂ ಹೀಗೆಯೇ - ಅಂದರೆ ನಗರದಲ್ಲಿ ರಾರಾಜಿಸುವ ಫ್ಲೆಕ್ಸಿ ಬೋರ್ಡ್‌ಗಳ ಮೂಲಕ. ಈ ನಮ್ಮ ನಾಯಕರ ಜನ್ಮ ದಿನದಂದು ಅವರ ಸ್ನೇಹಿತರು, ಹಿತೈಷಿಗಳು ಮತ್ತು ಹಿಂಬಾಲಕರು - ಇವರೆಲ್ಲರೂ ಬೇರೆ, ಬೇರೆ ವರ್ಗಕ್ಕೆ ಸೇರಿದವರೆ? - ತಮ್ಮ ಗುರುವಿಗೆ ಜನ್ಮ ದಿನದ ಶುಭಾಶಯಗಳನ್ನು ತಿಳಿಸಲು ಪೈಪೋಟಿ ನಡೆಸುತ್ತಾರೆ. ಈ ಮಂದಿಯ ಭಾವಚಿತ್ರಗಳೂ ಆ ಫ್ಲೆಕ್ಸಿ ಬೋರ್ಡ್‌ನಲ್ಲಿ ರಾರಾಜಿಸುತ್ತಿರುತ್ತವೆ. ಆದರೆ ಅವು ಯಾವುದೂ ಪರಿಚಿತ ಮುಖವಲ್ಲ. ನನ್ನ ಹಾಲಿನ ಏಜೆಂಟ್ ಮಾತ್ರ ನನ್ನ ಕಣ್ಣಿಗೆ ಬಿದ್ದಿದ್ದ. ಅವನು ಕಟ್ಟಾ ಅವರ ಕಟ್ಟಾ ಅನುಯಾಯಿ.

ಮುಂದೊಂದು ದಿನ ವಿ.ಐ.ಪಿ. ಆಗ ಬಯಸುವವರೂ ಇದೀಗ ತಮ್ಮ ವಯಸ್ಸನ್ನು ಈ ಫ್ಲೆಕ್ಸಿ ಬೋರ್ಡ್ ಮಾಧ್ಯಮದ ಮೂಲಕ ಹೇಳ ಹೊರಟಿದ್ದಾರೆ. XYZ ಎಂಬ ಭಾವಿ ಕಾರ್ಪೊರೇಟರ್/ಶಾಸಕನಿಗೆ ಅವನ ಹುಟ್ಟು ಹಬ್ಬದ ದಿನದಂದು ಅವನ ಮತ್ತು ಅವನ ಸ್ನೇಹಿತರ ಚಿತ್ರಗಳನ್ನು ಹೊತ್ತ ಫ್ಲೆಕ್ಸಿ ಬೋರ್ಡ್‌ಗಳು ಎಲ್ಲೆಡೆ ರಾರಾಜಿಸುತ್ತವೆ. ಅವುಗಳ ಮೂಲಕ ನಮಗೆ ಇಂತಹವನೊಬ್ಬ ನಾಯಕ ಇದ್ದಾನೆ, ಅವನ ವಯಸ್ಸು ಇಷ್ಟು, ಅವನ ಹಿತೈಷಿಗಳು ಇವರೆಲ್ಲ ಎಂದು ತಿಳಿಯುತ್ತದೆ. ನಮ್ಮ G.K. ಹೆಚ್ಚಾಗುತ್ತದೆ. ಯಾರಾದರೂ ಪ್ರಶ್ನೆ ಕೇಳಿದರೆ ಥಟ್ ಅಂತ ಉತ್ತರ ಹೇಳಬಹುದು. ಅಷ್ಟೇ ಅಲ್ಲ, ಒಂದು ಫ್ಲೆಕ್ಸಿ ಬೋರ್ಡ್ ಒಬ್ಬ ಮುಂದಾಗಲಿರುವ ನಾಯಕನನ್ನು 'ಕೋಟಿಯಲ್ಲೊಬ್ಬರು' ಎಂದು ವರ್ಣಿಸಿತ್ತು. ಇದನ್ನು ಅವರು ಯಾವ ಸಮೀಕ್ಷೆ, ಜನಗಣತಿ ಅಥವಾ ಎಕ್ಸಿಟ್ ಪೋಲ್ ಮುಖಾಂತರ ಕಂಡು ಹಿಡಿದರು ಎಂದು ನನಗೆ ಗೊತ್ತಾಗಿಲ್ಲದಿದ್ದರೂ ಈ 'ಕೋಟಿಯಲ್ಲೊಬ್ಬ' ನಾಯಕನನ್ನು ನೋಡಿ ಧನ್ಯನಾಗಲು ಹಾತೊರೆಯುತ್ತಿದ್ದೇನೆ. 'ಕೋಟಿಯಲ್ಲೊಬ್ಬ' ಎಂದರೆ ಇಡೀ ಭಾರತದಲ್ಲಿ ಒಂದು ನೂರು ಮಂದಿ ಇರಬಹುದಷ್ಟೆ. ಅದಕ್ಕೆ ಈ ಕಾತರ.

ಫ್ಲೆಕ್ಸಿ ಬೋರ್ಡ್‌ಗಳಿಂದ G.K. ಹೆಚ್ಚುತ್ತದೆ ಎಂದೆ. ಆದರೆ ಪ್ರಶ್ನೆಗಳೂ ಹುಟ್ಟಿಕೊಳ್ಳುತ್ತವೆ. ಅದೇನೆಂದರೆ, ಸಾಮೂಹಿಕ ವಿವಾಹದಂತೆ 20-30 ಮಂದಿ ಏಕೆ ಒಂದೇ ಫ್ಲೆಕ್ಸಿ ಬೋರ್ಡಿನಲ್ಲಿ

ರಾರಾಜಿಸುತ್ತಾರೆ? ಖರ್ಚು ಉಳಿಸಲು ಅವರೆಲ್ಲ ಸೇರಿ ಒಂದೇ ಬೋರ್ಡ್ ಹಾಕಿಸಿದರೆ? ಅಥವಾ ಸಮಷ್ಟಿ ಪ್ರಜ್ಞೆ ತೋರಿಸಲು ಈ ವಿಧಾನವೆ? ಅಥವಾ ನಾವು (ಇನ್ನೂ) ನಿಮ್ಮ ಜತೆ ಇದ್ದೇವೆ ಎಂದು ನಾಯಕನಿಗೆ ತಿಳಿಸಲು ಈ ವಿಧಾನವೆ? ಅಥವಾ, ನನ್ನ ಜತೆ ಅನೇಕ ಹಿಂಬಾಲಕರು ಇನ್ನೂ ಇದ್ದಾರೆ ಎಂದು ನಾಯಕ ನಮಗೆಲ್ಲ ತಿಳಿಸಲು ಈ ಯೋಜನೆಯೆ?

ಆದರೆ ಪರಿಸ್ಥಿತಿ ಏನೇ ಇರಲಿ, ನಿಜಾಂಶ ಏನೇ ಆಗಿರಲಿ ಈ ಫ್ಲೆಕ್ಸಿ ಬೋರ್ಡ್ ಸಂಸ್ಕೃತಿಯಿಂದ ಸುಪ್ರಸನ್ನರಾಗಿರುವವರು ಅದನ್ನು ತಯಾರಿಸುವ ಮಾಲೀಕರು. ತಮ್ಮ ಬ್ಯಾಂಕ್ ಬ್ಯಾಲೆನ್ಸ್ ಏರುತ್ತಿರುವುದನ್ನು ಅವರು ಖುಷಿಯಿಂದ ನೋಡುತ್ತಿದ್ದಾರೆ. ಈ ಸಂಸ್ಕೃತಿ ಇನ್ನಷ್ಟು ಪಸರಿಸಲಿ ಎಂದವರು ಭಗವಂತನನ್ನು ಸೀಕ್ರೆಟ್ಟಾಗಿ ಬೇಡಿಕೊಳ್ಳುತ್ತಿರಬಹುದು. ಅಭದ್ರ ನಾಯಕರು ಇರುವವರೆಗೂ ಫ್ಲೆಕ್ಸಿ ಬೋರ್ಡ್‌ಗಳಿಗೆ ಬೇಡಿಕೆ ಇದ್ದೇ ಇರುತ್ತದೆ.

ಅಂದ ಹಾಗೆ, ಇದರಿಂದ ಉಪಯೋಗವೂ ಇದೆ. ಏಕೆಂದರೆ, ನನ್ನ ಮಾಜಿ ನಾಪಿತ ತೀರಿಕೊಂಡಿದ್ದ ಸುದ್ದಿ ನನಗೆ ಈ ಫ್ಲೆಕ್ಸಿ ಬೋರ್ಡ್ ಮೂಲಕವಷ್ಟೇ ತಿಳಿದಿದ್ದು. ಅವನ ಅಂಗಡಿಯ ಮುಂದೆ ಅವನ ಚಿತ್ರವಿದ್ದ ಫ್ಲೆಕ್ಸಿ ಬೋರ್ಡ್ ನೇತುಹಾಕಿದ್ದು, ಅದಕ್ಕೊಂದು ಮಾಲೆ ಹಾಕಿ 'ಶ್ರದ್ಧಾಂಜಲಿ' ಎಂದು ಬರೆಯಲಾಗಿತ್ತು.

ಆದರೆ ಒಬ್ಬ ರಾಜ್‌ಕುಮಾರ್, ಒಬ್ಬ ವಿಷ್ಣುವರ್ಧನ್, ಜೀವನವನ್ನೇ ತ್ಯಾಗಮಾಡಿದ ಮೇಜರ್ ಉನ್ನಿಕೃಷ್ಣನ್ ಅಂತಹವರಿಗೆ ಆಮ್ ಆದ್ಮಿ ಸ್ವಯಂಪ್ರೇರಿತರಾಗಿ ತಮ್ಮ ಪ್ರೀತಿ, ಗೌರವ ತೋರಲು ಸಹ ಈ ಫ್ಲೆಕ್ಸಿ ಬೋರ್ಡ್‌ಗಳು ಸಹಕಾರಿ.

ಅಷ್ಟೇ ಅಲ್ಲ, ಹಪ್ಪಳ ಒಣಗಿಸಲು ಈ ಫ್ಲೆಕ್ಸಿ ಬೋರ್ಡ್ ಉಪಯೋಗಿಸಬಹುದು ಎಂಬುದು ನಿಮಗೆ ಗೊತ್ತೆ? ಇತ್ತೀಚೆಗೆ ನಾನು ಉತ್ತರ ಕನ್ನಡದಲ್ಲಿದ್ದಾಗ ನನಗೆ ಈ ವಿಷಯ ತಿಳಿಯಿತು. ರಸ್ತೆ ಬದಿ ಕಟ್ಟಿದ್ದ ಫ್ಲೆಕ್ಸಿ ಬೋರ್ಡ್‌ಗಳನ್ನು ಜನ ಕಿತ್ತುಕೊಂಡು ಹೋಗಿ ಹಪ್ಪಳಗಳನ್ನು ಒಣಗಿಸಲು ಬಳಸುತ್ತಿದ್ದಾರಂತೆ!

✲

ಇಷ್ಟು ಲೇಟಾಗಿ..

ಅದೊಂದು ತರಗತಿ. ಪಾಠ ನಡೆಯುತ್ತಿತ್ತು. ಆದರೆ ಬೋರೋ ಬೋರು. ಯಾವ ವಿದ್ಯಾರ್ಥಿಗೂ ಕೇಳುವ ತಾಳ್ಮೆ ಇರಲಿಲ್ಲ. ಆದರೆ ಲೆಕ್ಚರರ್ ಮಾತ್ರ ನಿರರ್ಗಳವಾಗಿ ಕೊರೆಯುತ್ತಿದ್ದರು.

ಹಿಂದಿನ ಬೆಂಚ್‌ನಲ್ಲಿದ್ದ ಹುಡುಗನೊಬ್ಬ ಸುತ್ತಮುತ್ತಲವರನ್ನು ಕೀಟಲೆ ಮಾಡುತ್ತಾ ಕಾಲಹರಣ ಮಾಡುತ್ತಿದ್ದ. ತಾಳ್ಮೆಗೆಟ್ಟ ಲೆಕ್ಚರರ್ ಅವನನ್ನು ಎಬ್ಬಿಸಿ 'ಗೆಟ್ ಔಟ್' ಎಂದು ಕೂಗಿದರು. ಅವನು ಭಾರಿ ಖುಷಿಯಿಂದ ಬಾಗಿಲತ್ತ ನಡೆದ. ಇದ್ದಕ್ಕಿದ್ದಂತೆ 'ಎಕ್ಸ್‌ಕ್ಯೂಸ್ ಮಿ' ಎಂದು ನಿಂತ.

'ವಾಟ್?' ಎಂದು ಲೆಕ್ಚರರ್ ಕೇಳಿದರು.

'ಗೆಟ್ ಔಟ್ ಎಂದು ಕ್ಲಾಸ್‌ನ ಆರಂಭದಲ್ಲೇ ಹೇಳಿದ್ದರೆ ಎಷ್ಟೊಂದು ಚೆನ್ನಾಗಿರ್ತಿತ್ತು ಅಲ್ವಾ?' ಎಂದು ಹೇಳಿ ಓಡಿದ.


ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2010

ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ ಬಡಾವಣೆ 1ನೇ ಹಂತ, ಬೆಂಗಳೂರು – 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2010.



Since 1998
Whisper Hearing Aids Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year
on purchase of hearing aids for this week
10am - 1.30pm, 5pm - 8pm
Appointment : 26640571, 9741765454

ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

ಡಾ|| ಜೆ. ಪುರುಷೋತ್ತಮ ಇಡಿ.ಡಿ.
ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ

ಒಂದು ಪೇಚಿನ ಪ್ರಸಂಗ

- ಮದ್ದೂಸದ್ನ

ಸ್ನೇಹಿತರೊಬ್ಬರ ಮೊಮ್ಮಗುವಿನ ನಾಮಕರಣ ಸಮಾರಂಭ. ನಾಮಕರಣ ಮುಗಿದು ಊಟಕ್ಕೆ ಎಲೆ ಹಾಕಿದರು. ಮೊದಲನೇ ಪಂಕ್ತಿ ಭರ್ತಿಯಾಯಿತು. ಎಲೆ ಸಿಗದೆ ಹೆಂಡತಿಯೊಡನೆ ಹೊರಗೆ ಬಂದು ಕುಳಿತೆ. ಮೊದಲನೇ ಪಂಕ್ತಿ ಊಟವಾಗುತ್ತಿದ್ದಂತೆ ಎರಡನೇ ಪಂಕ್ತಿಗೆ ಎಲೆ ಹಿಡಿಯಲು ಜನ ಧಾವಿಸಿದರು. ಅವರಲ್ಲಿ ಹೆಂಡತಿಯೊಡನೆ ನಾನೂ ಸಹ. ಊಟ ಮಾಡಿ ಕೈ ತೊಳೆಯಲು ಬರುತ್ತಿದ್ದ ಜೋಯಿಸರು ಎದುರಿಗೆ ಸಿಕ್ಕರು. ಹಿರಿಯರು ಕಂಡಾಗ ಮಾತನಾಡಿಸದಿದ್ದರೆ ಹೇಗೆ? ಊಟ ಆಯ್ತೆ? ಎಂದೆ, ಓಹೋ ನಾಗ್ರಾಜಾ ನೀ ಸಿಕ್ಕಿದ್ದು ಒಳ್ಳೇದಾಯ್ತು. ಒಳ್ಳೇ ಊಟ ಆಯ್ತು ಕಣಯ್ಯ. ಅಡಿಗೆ ಜೋರಾಗಿದೆ. ಅಂದ ಹಾಗೆ ಗೊಜ್ಜು ಯಾವ್ದರ್ದೋ ಗೊತ್ತಾಗ್ಲಿಲ್ಲ, ಆದ್ರೆ ಸಖತ್ತಾಗಿತ್ತಯ್ಯ. ಮರೀದೇ ಹಾಕಿಸ್ಕೊ. ಎರಡ್ ಸಲ ಹಾಕಿಸ್ಕೊಂಡ್ರೂ ಮೋಸ ಇಲ್ಲ, ಅನ್ನಕ್ಕೆ ಕಲಸ್ಕೊ ಚೆನ್ನಾಗಿರುತ್ತೆ. ಏನಾದ್ರೂ ಹೇಳು ನಿನ್ನ ಮಗಳ ಮದ್ವೆ ಊಟಾನಯ್ಯ, ಅದೇನು ಅಡಿಗೆ, ಅದೇನು ಭಕ್ಷಗಳು, ರುಚಿನೂ ಅಷ್ಟೇಬಿಡು, ನಾನಿನ್ನೆಲ್ಲೂ ಅಂಥಾ ಊಟ ಮಾಡ್ಲಿಲ್ಲ, ಅಂದ ಹಾಗೆ ಮಗಳು ಅಲ್ಲೇ ಆಸ್ಟ್ರೇಲಿಯಾನಾ? ಅಂತ ಕೇಳಿದರು. ಹೌದು ಅನ್ನುತ್ತಾ ತಲೆಯಾಡಿಸಿದೆ. ಇತ್ತೀಚ್ಗೆ ಬಂದಿದ್ಲೇನು? ಅಂತ ಜೋಯಿಸರ ಪ್ರಶ್ನೆ. ಇಲ್ಲ ಬಂದಿಲ್ಲ ಅಂದವನಿಗೆ ಎಲೆ ಹಿಡಿದುಕೊಂಡು ಕಾಯುತ್ತಿರುವ ಹೆಂಡತಿಯ ನೆನಪಾಗಿ ಭಯವಾಯ್ತು. ಇನ್ನು ಅವಳ ಹತ್ತಿರ ಏನೇನು ಮಾತುಗಳನ್ನು ಕೇಳ್ಬೇಕೋ ದೇವ್ರೇ ಎಂದುಕೊಂಡು ನನ್ನದಿನ್ನೂ ಊಟ ಆಗಿಲ್ಲ ಬರ್ಲೆ ಎಂದೆ. ಓ ಹೌದೇ, ಪಾಪ ಹೋಗು ನಡಿ ನಡಿ ಎಂದರು. ಬದುಕಿದೆಯಾ ಬಡಜೀವವೇ ಎಂದುಕೊಂಡು ಹೆಜ್ಜೆ ಇಡುವಷ್ಟರಲ್ಲಿ ನಾಗ್ರಾಜಾ ಅಂದ್ಹಾಗೆ ನಿನ್ನ ಮಗನ್ದು ಓದು ಮುಗೀತಾ? ಏನ್ಮಾಡ್ತಾ ಇದಾನೆ? ಕಳಚಿದ್ದ ಮಾತಿನ ಕೊಂಡಿ ಮತ್ತೆ ಜೋಡಿಸಿದರು. ಗ್ಯಾರಂಟಿ ಆಯ್ತು ಇನ್ನು ಇದು ದೊಡ್ಡ ಸರಪಳಿಯೇ ಎಂದು. ಅಮೆರಿಕಾದಲ್ಲಿದ್ದಾನೆ ಅಂದೆ. ಹೌದೇ ಭಾಳಾ ಒಳ್ಳೇದಾಯ್ತು ನೋಡು. ಕೆಲ್ಸಾ ಮಾಡ್ತಾ ಇದಾನ್ಯೇ ಅಂತ ಕೇಳಿದ್ದಕ್ಕೆ ಹೌದೆಂದು ತಲೆಯಾಡಿಸಿದೆ. ಎಷ್ಟೊರ್ಷ ಆಯ್ತೋ ಹೋಗಿ ಅನ್ನೋ ಮುಂದಿನ ಪ್ರಶ್ನೆಗೆ ಎರಡು ವರ್ಷ ಅಂದೆ. ಒಳ್ಳೆದಾಯ್ತು ಬಿಡು, ಮನೆ ಮಠ ಏನಾದ್ರೂ ಖರೀದಿ ಮಾಡಿದೀಯಾ ಅವನ್ದೆಷ್ಟಲ್ಲಿ. ಯಾಕೆಂದ್ರೆ ಈಗಿನ್ ಕಾಲದ್ ಹುಡುಗ್ರು ಲಂಗಿಲ್ಲ ಲಗಾಮಿಲ್ಲ ಖರ್ಚಿನ ಮೇಲೆ ಹಿಡಿತಾ ಇರೋಲ್ಲ, ನಾವು ದೊಡ್ಡೋರು ಬುದ್ದಿ ಹೇಳಿ ನಾಲಕ್ ಕಾಸು ಕೂಡಿಡೋದು ಹ್ಯಾಗೇಂತ ಹೇಳ್ಕೊಡ್ಬೇಕು, ಇಲ್ವಾನ್ತೀಯಾ? ಅಂತ ಪ್ರಶ್ನಿಸಿದರು. ನಾನು ಹೇಗೆ ಇಲ್ಲಾ ಅನ್ಲಿ. ಒಂದು ವೇಳೆ ಅಂದ್ರೂ ಜೋಯಿಸರು ಸುಮ್ಮನೆ ಬಿಡ್ತಾರ್ಯೆ. ಅದಕ್ಕೆ ನೀವು ಹೇಳೋದೂ ಸರೀನೇ ಅಂದೆ. ನಿಮಗೆ ಅರ್ಥ ಆಗುತ್ತಪ್ಪ ನಮ್ಮ ಮಾತಿನ ಬೆಲೆ. ಈಗಿನ

ಕಾಲದ ಮುಂದೇವಕ್ಕೆ ಏನೋಗ್ತಾಗುತ್ತೆ. ಮೊದ್ಲೆಲ್ಲಾ ದೊಡ್ಡೋರಿಗೆ ಭಯಾ ಭಕ್ತಿನ್ನೋದು ಇರ್ಬೇಕು ಜೋಯಿಸರ ಉವಾಚ

ನಿಜವಾಗಿಯೂ ನನಗಂತೂ ಭಯ ಶುರುವಾಗಿತ್ತು ನನ್ನ ಹೆಂಡತೀದು. ಎಲೆ ಹಿಡ್ಕೊಂಡು ಕಾದಿರ್ತಾಳೆ. ಅವನ್ನು ಬಿಟ್ಟು ಕರ್ಯೋದಕ್ಕೆ ಬಂದ್ರೆ ಎಲೆ ಹೋಗುತ್ತೇನ್ನೋ ಭಯ. ಬೇಗ ಊಟ ಮುಗ್ಸಿ ಮನೆಗ್ಹೋಗ್ಬೇಕು. ಲೇಟಾದ್ರೆ ಇನ್ನು ನನಗೆ ಅಷ್ಟೋತ್ತರಾನೋ ಯಾಮಾರಿದ್ರೆ ಶತನಾಮಾವಳಿನೇ ಆಗಬಹುದು ಅನಿಸಿತು. ಧೈರ್ಯ ಮಾಡಿಯೇ ಬಿಟ್ಟೆ, ನನ್ನದಿನ್ನೂ ಊಟ ಆಗಿಲ್ಲ, ಬಡಿಸ್ತಾ ಇದಾರೇಂತ ಕಾಣುತ್ತೆ, ಬರ್ಲೇ? ಅಯ್ಯೋ ಹೌದಾ, ಪಾಪ ನಡೀ ಕೂತ್ಕೋ ನಡೀ ಅಂತ ಪರ್ಮಿಷನ್ ಕೊಟ್ಟೇ ಬಿಟ್ಟರು. ಜೀವಕ್ಕೆ ಒಂದು ರೀತಿ ಸುಖ ಅನಿಸಿತು. ಮುಂದಿಟ್ಟದ್ದು ಒಂದೇ ಹೆಜ್ಜೆ ಅಷ್ಟೆ ತೋಳನ್ನು ಬಲವಾಗಿ ಹಿಡಿದಂತಾಯ್ತು. ತಿರುಗಿದೆ, ಅದೇ ಜೋಯಿಸರು. ಬಾ ಇಲ್ಲಿ ಒಂದ್ ಮಾತು ನಾನೇನು ಹೇಳ್ಬೇಕೂಂತಿದ್ದೇಂದ್ರೆ, ಆ ಮೂಲೆ ಮನೆ ಶಾಮಣ್ಣ ಇದಾನೆ ನೋಡು ಅವನ ಮಗಾನೂ ಅಮೆರಿಕಾಗೇ ಹೋಗಿದ್ದು, ಎರಡ್ ವರ್ಷ ಆದ್ಮೇಲೆ ಇತ್ಲಾಗೆ ಬಂದ. ಬಂದಾಗ ಅಮ್ಮಂಗೆ ಬಳೆ ನೆಕ್ಲೇಸು ಅದೂ ಇದೂಂತ ತಂದ್ಕೊಟ್ಟು, ಅಪ್ಪಂಗೆ ಒಂದು ಕಾರ್ ಕೊಡ್ಸಿ ಗಿಲೀಟಿನ ಮಾತಾಡಿ ಈಗೇನ್ ಮಾಡಿದಾನೆ ಗೊತ್ತಾ? ಅಂದರು. ಇಲ್ಲ ಗೊತ್ತಿಲ್ಲ ಅಂದೆ. ಅಲ್ಲೇ ಯಾರನ್ನೋ ಮದ್ವೆ ಆಗಿ ಮಗೂನೂ ಆಯ್ತಂತೆ. ನಾಲಕ್ ವರ್ಷ ಆಯ್ತಂತೆ ಇತ್ಲಾಗೆ ಬಂದು. ಹೆತ್ರೂ ಇಲ್ಲ ಸತ್ರೂ ಇಲ್ಲ. ಯಾರಾದ್ರೂ ಸತ್ರೆ ಇವರಿಗೋಸ್ಕರ ಆ ಹೆಣಾನಾ ಮಂಜುಗೆಡ್ಡೇಲಿಡಿಸ್ಬೇಕು ಮೂರ್‍ನಾಲಕ್ ದಿನ. ಆತ್ಮದ ಗತಿ ಏನಯ್ಯ, ಎಷ್ಟು ಶಿಕ್ಷೆ ಅನುಭವಿಸ್ಬೇಕು ಅದು. ಈಗ್ಯಾಕ್ಹೇಳಕ್ಕೆ ಬಂದೇಂದ್ರೆ ನಿನ್ನ ಮಗ ಹಾಗಲ್ಲ, ನಾನೋಡಿಲ್ವೆ ಅವನ್ನ ಚಿಕ್ ಮಗೂನಿಂದ. ಈಗೇನಪ್ಪಾಂದ್ರೆ ಆ ಕೆ.ಇ.ಬಿ. ರಂಗಣ್ಣ ಇದಾನೆ ನೋಡು, ಅವನ ಮಗ್ಳು ಇಂಜಿನೀಯರ್ ಪಾಸ್ ಮಾಡ್ಕೊಂಡು ಅದೇನೋ ಕಂಪ್ನಿ ಹೇಳಿದ್ರು ಅಲ್ಲಿದಾಳಂತೆ. ತಿಂಗಳಿಗೆ ಅದೆಷ್ಟೋ ಸಾವ್ರಾ ಬರುತ್ತೇಂದ್ರಪ್ಪ ಸಂಬ್ಳ. ನೋಡು ಒಳ್ಳೆ ಜನ, ಮಗನಿಗೆ ಮಾಡ್ಕೊಳೋ ಹಾಗಿದ್ರೆ ಮಾತಾಡ್ತೀನಿ ಅಂದ್ರು. ಗಡಿಯಾರ ನೋಡಿದೆ ಎರಡು ಗಂಟೆ. ಆಯ್ತು ಜೋಯಿಸ್ರೇ, ವಿಚಾರ ಮಾಡಿ ತಿಳಿಸ್ತಿನಿ, ಈಗ ಊಟಕ್ಕೆ ಹೋಗ್ಲಾ ಎಂದೆ. ಇನ್ನೆಲ್ಲಿಗೋಗ್ತೀರಾ? ಅಡಿಗೆಯೋರು, ಕೆಲ್ಸದೋರು ಎಲ್ಲ ನಮ್ಮ ಜೊತೇನೇ ಕೂತು ಊಟ ಮುಗಿಸಿದ್ರು. ನಿಮ್ಮ ಒಬ್ಬರಿಗೇ ಈಗೇನು ಸಪರೇಟು ಬನ್ನಿ ಮನೆ ಕಡೆ ಕೈ ತೊಳೆದು ಬರುತ್ತಿದ್ದ ಹೆಂಡತಿ ಕಣ್ಣಲ್ಲಿ ಕೆಂಡ ಕಾರುತ್ತಾ ಮುಖದಲ್ಲಿ ನಗು ಬೀರುತ್ತಾ ಹೇಳಿದಳು. ಜೋಯಿಸರು ಗಾಬರಿಯಿಂದ ಅಂದ್ರೆ ನಿನ್ನದಿನ್ನೂ ಊಟ ಇಲ್ವಾ? ಮೊದ್ಲೇ ಹೇಳಬಾರದೇನಯ್ಯ? ನಾನು ನೀನು ಊಟ ಮುಗಿಸಿ ಕೈ ತೊಳ್ಯೋದಕ್ಕೆ ನಿಂತಿದೀಯ ಅಂದ್ಕೊಂಡೆ. ಅಯ್ಯೋ ನೋಡು ಮಾತಲ್ಲಿ ನಾನು ಕೈ ತೊಳೆಯೋದೇ ಮರೆತುಹೋದೆ. ಕೈಯೆಲ್ಲ ಒಣಗಿ ಗಟ್ಟಿ ರಟ್ಟಾಗಿದೆ. ಇನ್ನು ಎಷ್ಟು ಉಜ್ಜಿ ತೊಳೀಬೇಕೋ, ನಾನು ಬರ್ಲಾಪ್ಪಾ, ನಾನು ಹೇಳಿದ್ದು ಸ್ವಲ್ಪ ನೆನಪಿಟ್ಕೊ ಎಂದರು. ನೆನಪು ಇಟ್ಕೊಳೋದೇನು, ಸಾಯೋತನಕ ಮರೆಯೋದುಂಟಾ ನಿಮ್ಮನ್ನು ಎಂದುಕೊಳ್ಳುತ್ತಾ ಹೆಂಡತಿಯ ಹಿಂದೆ ನಡೆದೆ.

✲

ಸಂವಾದ

- ಎಸ್. ರಾಜಗೋಪಾಲಾಚಾರಿ

(ಅಣಕಹಾಡು : ಬಬ್ರುವಾಹನ ಚಿತ್ರದ 'ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮ' ಧಾಟಿ)

ಹಳ್ಳಿಯವ : ಯಾರು ತಿಳಿಯರು ನಿನ್ನ ಹಣಬಲದ ಪರಾಕ್ರಮಾ
ವಿಶ್ವಬ್ಯಾಂಕಿನ ಕೃಪೆಯೇ ನಿನ್ನ ವಿಜಯಗಳ ಮರ್ಮ
ಎಲ್ಲದಕು ಕರುಣೆಯಲಿ ಕೊಡುವ ಆ ಪರಮಾತ್ಮಾ
ಸಾಲದಿಂದಲೇ ಬಸ್ಸುಗಳ ಖರೀದಿ ಒಳಮರ್ಮ
ನಿನಗಂತು ಇನಿತಿಲ್ಲ ಸ್ವಾಭಿಮಾನ
ಅವರ ನೆರವಿಲ್ಲದೇ ನೀನು ತೃಣಕ್ಕೆ ಸಮಾನಾ.........

ನಗರವಾಸಿ : IT, BTಯ ಹಣದ ಲಕ್ಷಗಳ ಬಲನೋ
ಮಾಹಿತಿಯ ಜ್ಞಾನದಲಿ ವಿಶ್ವಖ್ಯಾತಿಯಂ ಪಡೆದವನೋ
ಗ್ರಹಗಳಾ ನಿಗ್ರಹದಿ ಕೀರ್ತಿಯನು ಪಡೆದ ಅಗ್ರನಿವನೋ.........
ವಿಶ್ವವ್ಯಾಪೀ

ಹಳ್ಳಿಯವ : ಓಹೋಹೋ...... ವಿಶ್ವವ್ಯಾಪಿ
Foreign Bankಗಳು Credit Cardಉ ಗಳಿಂದ
ಸಾಲವನು ಹೊರೆಸಿದ್ದೆ ನಿನ್ನ ಶೌರ್ಯ
Complexಉ ಗಳ ಕಟ್ಟಿ ಹಣದಿ ತಕಥೈ ಕುಣಿದು
ಕೆರೆಗಳನು ಕಬಳಿಸಿದ ಕೇಡಿ ನೀನು
Metro Rail ಎನ್ನುತ ಮರಗಳನು ಛೇದಿಸಿದೆ
Niceಗೆ ನೆಲ ನುಂಗಿದ ಭ್ರಷ್ಟಾ ನೀನು.
ಥಂಡಿ ಗಾಳಿಯು ಎಲ್ಲೋ, ದಂಡಿ ಗಿಡಗಳು ಎಲ್ಲೋ
ಕೊಚ್ಚೆ ತುಂಬಿದ ಗುಂಡಿ, ಊರೇ.. ಒಂದು ಚರಂಡೀ

ನಗರವಾಸಿ : ಘಡ ಘಡಾ ಚರಂಡಿಯೆಂದೆನದೆ, ಊರ ವೈಭವ ನೋಡೋ ಮೂಢಾ
Inox ಥೇಟರ್ರು, Tech Parkಉ Towerಉ ಗಳು ಔತಣವೀವ ಆ ಠೀವಿ
ನಮ್ಮಯ ಸಿಟಿ ಭವ್ಯ ಬ್ರಹ್ಮಾಂಡ ಭೂಮಂಡಲದೊಳಖಂಡ ಕೀರ್ತಿ ಪ್ರಚಂಡಾ...........

ಹಳ್ಳಿಯವ : ಮುಗಿಯಿತೋ ನಿನ್ನ ಊರ ಪುರಾಣ
ಆಂಗ್ಲ ಮೋಹಕೆ ಬಿದ್ದು Conventಉ ಗಳ ಕಟ್ಟಿ
ಕನ್ನಡವ ಕಡೆಗಣಿಸಿ, ಕನ್ನಡವ ಕೊಲೆಗೈದವರ ಊರೋ
Pubಉ Clubಉ ಗಳ ಬೆಳೆಸಿ, ಯುವಕ ಯುವತಿಯರ ಕೆಡಿಸಿ
Rodಉ ಮಚ್ಚನು ಹಿಡಿದು ರೋಡಿನಲೆ ಕಾದಾಡೋ
Rowdyಗಳ ತಾಣವೋ ನಿಮ್ಮ ಊರು...
ಹಣ, ಹಣ, ಹಣಾ ಎಂದು ಹಣಕಾಗಿ ಹೆಣಗಾಡೋ
ಧನಪಿಶಾಚಿಗಳ ಬೀಡು ನಿಮ್ಮ ಊರೋ

ನಗರವಾಸಿ : ಹೂಂ. ಸಾಕು ನಿಲ್ಲಿಸು ನಿನ್ನ ಪ್ರಲಾಪ
ಹಣವಿಲ್ಲದೇ ಈ ಜಗದಿ ಏನೂ ಸಿಕ್ಕೋಲ್ಲ
ಹಣವಿಲ್ಲದವನಿಗೆ ಯಾವ ಬೆಲೆಯೂ ಇಲ್ಲ
ಹಣವಿಲ್ಲದವನು ಇಲ್ಲಿ ಹೆಣಕ್ಕೆ ಸಮಾನಾ........

ಹಳ್ಳಿಯವ : ಹಸಿವ ನೀಗುವುದಿಲ್ಲ ಹಣ
ನಾವು ಬೆಳೆದರೇನೇ ನಿನಗೆ ಅನ್ನ
ಇಲ್ಲದಿದ್ದರೆ ನಿನ್ನ ಗತಿ ಚಿಂದಿ ಚಿತ್ರಾನ್ನಾ............

ಯಾರು ಕೇಳುವುದು?

ತಿಮಿಂಗಲದ ಬಗ್ಗೆ ಪುಟ್ಟ ಹುಡುಗಿ ತನ್ನ ಟೀಚರ್ ಜತೆ ಮಾತಾಡ್ತಿದ್ದಳು.
"ತಿಮಿಂಗಲ ಅಷ್ಟು ದೊಡ್ಡದಾಗಿದ್ದರೂ ಇಡೀ ಮನುಷ್ಯನನ್ನು ನುಂಗಲು ಅದಕ್ಕೆ ಅಸಾಧ್ಯ" ಎಂದು ಟೀಚರ್ ಹೇಳಿದರು.
"ಇಲ್ಲ ಮಿಸ್, ನನ್ನ ಫ್ರೆಂಡೊಬ್ಬಳನ್ನು ಅದು ನುಂಗಿ ಹಾಕಿತು" ಎಂದಳು ಹುಡುಗಿ.
"ಇಲ್ಲ ಅದು ಅಸಾಧ್ಯ" ಎಂದು ಟೀಚರ್ ಹೇಳಿದರು.
"ಇಲ್ಲ ಮಿಸ್ ಸಾಧ್ಯ" ಎಂದಳು ಹುಡುಗಿ.
"ಅದು ಅಸಾಧ್ಯ" ಎಂದು ಟೀಚರ್ ಮತ್ತೆ ಹೇಳಿದರು.
"ನಾನು ಸ್ವರ್ಗಕ್ಕೆ ಹೋದಾಗ ಅವಳನ್ನೇ ಕೇಳ್ತೀನಿ" ಎಂದಳು ಹುಡುಗಿ.
"ಅವಳು ನರಕದಲ್ಲಿದ್ದರೆ ಏನು ಮಾಡ್ತೀ?" ಎಂದು ಟೀಚರ್ ಕೇಳಿದರು.
"ನೀವೇ ಕೇಳಿ ಮಿಸ್" ಎಂದಳು ಘಾಟಿ ಹುಡುಗಿ.

– ಕುಬ್ಜ

ಹಾಸ್ಯದೊಂದು ಝಲಕ್

- ಬೇಲೂರು ರಾಮಮೂರ್ತಿ

ಹಾಸ್ಯದ ಸನ್ನಿವೇಶಗಳು ನಮ್ಮ ಜನಪದ, ಪೌರಾಣಿಕ ಹಾಗೂ ಇನ್ನಿತರ ಪ್ರಾಕಾರಗಳಲ್ಲೂ ಮಿಂಚಿರುವುದನ್ನು ನಾವು ಗಮನಿಸಿದ್ದೇವೆ. ಅಂಥಾ ಒಂದೆರಡು ತುಣುಕುಗಳು ನಿಮಗಾಗಿ.

ದ್ರೌಪದಿ ಸ್ವಯಂವರದ ಪ್ರಸಂಗ. ಅನೇಕ ರಾಜಮಹಾರಾಜರುಗಳು ಆಸೀನರಾಗಿದ್ದಾರೆ. ಒಬ್ಬೊಬ್ಬರಾಗಿ ಧನಸ್ಸನ್ನು ಎತ್ತಲು ಹವಣಿಸುತ್ತಿದ್ದಾರೆ. ಒಬ್ಬೊಬ್ಬರು ತಿಣುಕಿದಾಗಲೂ ಸಭೆಯಲ್ಲಿ ಒಂದು ರೀತಿಯ ಮೌನ ನಗೆ. ಮತ್ತೆ ಮುಂದಿನ ಸರದಿ ನನ್ನದಾದಾಗ ನನಗೂ ಇದೇ ಗೋಳಾಗಬಹುದು ಎನ್ನುವ ಆತಂಕ ಎಲ್ಲ ರಾಜಕುಮಾರರಲ್ಲೂ ಇತ್ತು. ಅದರಲ್ಲೂ ದುರ್ಯೋಧನ ಸೋತಾಗಲಂತೂ ಉಳಿದ ರಾಜಕುಮಾರರು ಹೆದರಿದರು. ಎಲ್ಲ ರಾಜಕುಮಾರರ ಸರದಿಯೂ ಆಯಿತು. ಉಳಿದವರು ಯಾರು ಬೇಕಾದರೂ ಪ್ರಯತ್ನಿಸಬಹುದು ಅಂತ ರಾಜಾಜ್ಞೆಯಾದ ಮೇಲೆ ಸಭೆಯಲ್ಲಿ ವೇಷ ಮರೆಸಿಕೊಂಡು ಕೂತಿದ್ದ ಅಣ್ಣ ಧರ್ಮರಾಯನ ಕಣ್ಸನ್ನೆಯನ್ನನುಸರಿಸಿ ಬ್ರಾಹ್ಮಣನ ವೇಷದಲ್ಲಿದ್ದ ಅರ್ಜುನ ಎದ್ದು ನಿಂತ. ಆಗ ಅರ್ಜುನನನ್ನು ಅಣಕಿಸಿ ಸಭಾಸದರಲ್ಲೊಬ್ಬ ಹೇಳುವ ಪದ್ಯದಲ್ಲಿ ಹಾಸ್ಯ ಹೇಗಿದೆ ನೋಡಿ.

ಎದ್ದೆದ್ದೇನುಪಾಧ್ಯರೇ
ತದ್ದಿನದೂಟವೆ ಮೇಲೆದ್ದಿರಿ
ಎದ್ದೆದ್ದೇನುಪಾಧ್ಯರೇ
ಸಜ್ಜಿಗೆಯಿಲ್ಲ, ಹೋಳಿಗೆಯಿಲ್ಲ
ಉದ್ದಿನ ವಡೆ ಕಜ್ಜಾಯಗಳಿಲ್ಲ
ಮಜ್ಜಿಗೆ ಪಳಿದ್ಯವು ಮೊದಲೇ ಇಲ್ಲ
ಗೊಜ್ಜು ಬಜ್ಜಿಯು ಕೂಡಾ ಇಲ್ಲ
ಎದ್ದೆದ್ದೇನುಪಾಧ್ಯರೇ ನೀ
ವೆದ್ದೆದ್ದೇನುಪಾಧ್ಯರೇ

ಅಂದ್ರೆ, ಈತ ಬ್ರಾಹ್ಮಣ, ಏನೋ ಭೂರೀ ಭೋಜನವಿರಬೇಕೆಂದುಕೊಂಡು ಎದ್ದು ನಿಂತಿದ್ದಾನೆ ಅಂತ ತಮಾಷೆ ಮಾಡುವ ಪ್ರಸಂಗ ಇದು.

- ಒಬ್ಬ ದಾಸರು ನಿತ್ಯ ಯಾತ್ರೆ ಮಾಡಿಕೊಂಡು ಜೀವನ ಕಳೆಯುತ್ತಿದ್ದರು. ಅವರು ಕೂಗುವ ಧಾಟಿ ಹೇಗಿತ್ತೆಂದರೆ ಅದು ಅಪಾರ್ಥಕ್ಕೆ ಎಡೆಮಾಡಿಕೊಡುವ ಹಾಗಿತ್ತು. ಒಂದು ಮನೆಯ ಮುಂದೆ ನಿಂತು ಅವರು ಕೂಗಿದರು ದಾರಿದ್ರಮ್ಮ ಮನ್ಯಾಗೆ ಅಂತ.

ಮನೆಯಾಕೆ ಒಳಗಿಂದ ಬಂದು ರೇಗಿದಳು. ಅದಕ್ಕೆ ಇವರು ನಾನು ಹೇಳಿದ್ದು ಆದಾರಿದ್ದ್ರಮ್ಮ, ಮನೆಯೊಳಗೆ ಅದಾರಿದ್ದೀರಮ್ಮ ಅಂತ. ಹಾಗೆ ಹೇಳಿ ಯಾರು ಯಾರು ಎಲ್ಲಿ ಎಲ್ಲಿ ಇದ್ದರೆ ಚಂದ ಅಂತ ಒಂದು ಪದ್ಯವನ್ನೇ ಹೇಳಿಬಿಟ್ಟರು. ಆ ಪದ್ಯ ಹೀಗಿದೆ.

ದಾರಿದ್ದರೆ ಛಂದ ಮನೆಗೆ ಆ
ದಾರಿದ್ದರೆ ಛಂದ
ಕುದುರೆಗೆ ಕಾಸ್ತಾರಿದ್ದರೆ ಛಂದ
ಸೈನ್ಯಕೆ ಸರ್ದಾರಿದ್ದರೆ ಛಂದ
ರಾಯಕೆ ಛೋಪ್ದಾರಿದ್ದರೆ ಛಂದ
ಚೆಲುವೆಗೆ ಚೆಲುದಾರಿದ್ದರೆ ಛಂದ

- ಬಹಳ ಹಿಂದೆ ದ್ವಾರಕಾ ಪಟ್ಟಣದಲ್ಲಿ ಒಬ್ಬ ಭಿಕ್ಷುಕ ಇದ್ದ. ಅವನು ಬಹಳ ಹುಷಾರಿ. ಜನರನ್ನು ಹೊಗಳಿ ತನ್ನ ಕೆಲಸ ಮಾಡಿಕೊಳ್ಳುವುದರಲ್ಲಿ ನಿಸ್ಸೀಮ. ಒಂದು ದಿನ ಒಂದು ಮನೆಗೆ ಹೋಗಿ ಭಿಕ್ಷಕ್ಕೆ ನಿಂತು ಸೋಬ್ ನಾರಿ ತಿಗಡೀ ಪಗಡೀ, ಏಕ್ ನಾರೀ ಪತಿವ್ರತಾ ಅಂದ. ಮನೆಯಾಕೆ ಅದು ಯಾರು ಅಂತ ಕೇಳಿದ್ದಕ್ಕೆ ನೀವೇ ತಾಯಿ ಅಂದ. ಆಕೆಗೆ ಖುಷಿಯಾಗಿ ತುಂಬಾ ಭಿಕ್ಷೆ ನೀಡಿದಳು. ಹಾಗೆ ಭಿಕ್ಷೆ ಕಾಯಕ ಮಾಡಿಕೊಂಡು ತನ್ನ ಮನೆಗೆ ಬಂದಾಗ ಮನೆಯೊಳಗಿಂದ ಯಾರೋ ಗಂಡಸಿನ ಧ್ವನಿ ಕೇಳಿಬಂತು. ಅವನು ಕೃಷ್ಣನಿಗೆ ದೂರು ಕೊಟ್ಟ. ಮತ್ತೊಂದು ದಿನ ತನ್ನ ಮನೆಯ ಒಳಗಿಂದ ಅದೇ ರೀತಿ ಗಂಡಸಿನ ಧ್ವನಿ ಬಂದಾಗ ಅವನು ಸೋಬ್ ನಾರಿ ತಿಗಡೀ ಪಗಡೀ ಏಕ್ ನಾರೀ ಪತಿವ್ರತಾ, ಉನ್ಹೇಬೀ ತಿಗಡೀ ಪಗಡೀ ಉನ್ಹೇಬಿ ತಿಗಡೀ ಪಗಡೀ ಅಂದ. ಆಗ ಅವನ ಮನೆಯೊಳಗಿಂದ ಸಾಕ್ಷಾತ್ ಕೃಷ್ಣನೆ ಹೊರಬಂದ. ಭಿಕ್ಷುಕ ಗಾಬರಿಯಾದ. ಆಗ ಕೃಷ್ಣ ಇನ್ಮೇಲೆ ಪತಿವ್ರತೆಯರ ವಿಚಾರದಲ್ಲಿ ಹಗುರವಾಗಿ ಮಾತಾಡಬೇಡ ಅಂತ ಎಚ್ಚರಿಕೆ ಕೊಟ್ಟು ಹೋದ.

✵

ಅವಳೇ ಇಲ್ಲವಲ್ಲ?

ಒಮ್ಮೆ ವಿದ್ಯಾರ್ಥಿಗಳು ಸತ್ಯವಾನ್ ಸಾವಿತ್ರಿ ನಾಟಕ ಅಭಿನಯಿಸಿದರು. ನಾಟಕ ಮುಗಿದ ನಂತರ ಎಲ್ಲರೂ ಎಚ್ಚೆನ್ ಜತೆ ನಿಂತು ಫೋಟೋ ತೆಗೆಸಿಕೊಳ್ಳಬೇಕೆಂದರು. ನಾಟಕದ ಯಮನ ಪಾತ್ರಧಾರಿ ಬಂದು ಎಚ್ಚೆನ್ ಪಕ್ಕದಲ್ಲೇ ನಿಂತ. ನನಗೆ ಸಾಯಲು ಇಷ್ಟ ಇಲ್ಲ, ತುಂಬಾ ಹತ್ತಿರ ಬರಬೇಡ ಎಂದು ಎಚ್ಚೆನ್ ಅವನಿಗೆ ಹೇಳಿ ಸತ್ಯವಾನನನ್ನು ಬಿಟ್ಟುಕೊಟ್ಟಂತೆ ನನ್ನನ್ನೂ ಬಿಟ್ಟುಕೊಡು ಎಂದರು.
ಆ ಯಮ ತುಂಬ ಬುದ್ಧಿವಂತ. ನಿಮಗೆ ಸಾವಿತ್ರಿಯೇ ಇಲ್ಲವಲ್ಲ ಸಾರ್ ಎಂದು ತಿರುಗೇಟು ಹಾಕಿದ.

ಹುರುಳಿ ಕಟ್ಟು...

ನೈತಿಕ ಪ್ರಶ್ನೆ...

- ಎಚ್.ಗೋಪಾಲಕೃಷ್ಣ

ಪ್ರತಿ ವರ್ಷದ ಸ್ವಾತಂತ್ರ್ಯೋತ್ಸವ ದಿವಸದಂದು ನಮ್ಮ ಬಡಾವಣೆಯ ನಾಗರಿಕರು ಸೇರಿ ಬಾವುಟ ಹಾರಿಸಿ ಧ್ವಜವಂದನೆ ಸಲ್ಲಿಸುತ್ತೇವೆ. ದಿನದ ವಿಶೇಷಕ್ಕೆ ತಕ್ಕ ಹಾಗೆ ಕೆಲವರು ಆ ದಿವಸದ ಪ್ರಾಮುಖ್ಯತೆಯನ್ನು ಕುರಿತು ಮಾತನಾಡುವುದು, ನಮ್ಮ ಬಡಾವಣೆಯನ್ನು ಹೆಚ್ಚು ನಾಗರಿಕ ಮಾಡಲು ತೆಗೆದುಕೊಳ್ಳಬೇಕಿರುವ ಕ್ರಮಗಳ ಬಗ್ಗೆ ನಮ್ಮ ನಮ್ಮ ಅನಿಸಿಕೆಗಳು... ಹೀಗೆ ಅರ್ಧ ಒಂದು ಗಂಟೆ ಕಾರ್ಯಕ್ರಮ ನಡೆದ ನಂತರ ಸಿಹಿ ಹಂಚಿಕೊಂಡು ಎಲ್ಲಾ ಚೆನ್ನಾಗಿ ಆಯಿತು ಎಂದು ಬೀಗಿ ಮನೆ ಸೇರುತ್ತೇವೆ. ಮೊದಮೊದಲು ಸುಮಾರು ಜನ ಈ ಕಾರ್ಯಕ್ರಮಕ್ಕೆ ನೆರೆಯುತ್ತಿದ್ದರು. ಅದರಲ್ಲಿ ಸುಮಾರು ಹುಡುಗರೂ ಯುವಕರೂ ಇರುತ್ತಿದ್ದರು. ಅದೇ ಹುಡುಗರು ಬೆಳೆದ ನಂತರ ಈ ರೀತಿಯ ಸಭೆಗಳಿಗೆ ಬರುವುದನ್ನು ಕಡಿಮೆ ಮಾಡಿದರು. ಆಗ ಯುವಕರಾಗಿದ್ದ ಸುಮಾರು ಜನ ಈಗ ಕೆಲಸದಿಂದ ನಿವೃತ್ತರಾಗಿ ಇಲ್ಲೇ ಇದ್ದರೂ ಆಸಕ್ತಿ ಕಳೆದುಕೊಂಡರು. ಕೆಲವರು ಮಾತ್ರ ಆಸಕ್ತಿ ಉಳಿಸಿಕೊಂಡು ಈ ರೀತಿಯ ಸಭೆಗಳಿಗೆ ಹೋಗಿ ಅಲ್ಲಿ ಮಾತಿನ ಚಪಲ ತೀರಿಸಿಕೊಂಡು ಖುಷಿ ಪಡುತ್ತಾ ಬಂದಿದ್ದೇವೆ.

ಮೊನ್ನೆ ನಡೆದ ಸ್ವಾತಂತ್ರ್ಯೋತ್ಸವದ ಸಭೆಗೆ ಮಾಮೂಲಿನ ಹಾಗೆ ಬರಲೇ ಬೇಕಿದ್ದ ನಮ್ಮ ರಾಜಾರಾಯರು ಗೈರು ಹಾಜರಾಗಿದ್ದರು. ಸುಮಾರು ವರ್ಷಗಳಿಂದ ಸಭೆಗೆ ಹಾಜರಾಗಿ ಅವರ ಮಾತುಗಳನ್ನು ನಮಗೆ ಕೇಳಿಸುತ್ತಾ ಬಂದಿದ್ದ ಅವರು ಬರದೇ ಇದ್ದದ್ದು ಸಹಜವಾಗಿಯೇ ನಮಗೊಂದು ಆಶ್ಚರ್ಯ ಹುಟ್ಟಿಸಿತು. ಸಭೆ ಮುಗಿಸಿ ಅವರ ಮನೇಗೆ ಹೋದೆ.

ಸಪ್ಪೆ ಮೋರೆ ಹೊತ್ತು ರಾಯರು ಕೂತಿದ್ದರು. ಸುಮಾರು ವರ್ಷಗಳಿಂದ ರಾಯರು ನಮ್ಮ ಬಡಾವಣೆಯಲ್ಲಿಯೇ ಇದ್ದವರು ಮತ್ತು ನಮ್ಮೆಲ್ಲರ ಆಪ್ತರೂ ಹೌದು. ಅವರ ಇಬ್ಬರು ಮಕ್ಕಳು ಹೊರದೇಶದಲ್ಲಿ ಕೆಲಸ. ಇವರು ಇಲ್ಲಿ ನಿವೃತ್ತ ಜೀವನವನ್ನು ಕಳೆಯುತ್ತಿದ್ದವರು. ಊರಿನಲ್ಲಿನ ಹುಡುಗರು ಹುಷಾರಿದಾರೋ ಇಲ್ಲವೋ ಎನ್ನುವ ತವಕದಿಂದಲೇ ರಾಯರನ್ನು ಮಾತಿಗೆಳೆದೆ. ಹುಡುಗರು ಆರೋಗ್ಯವಾಗಿದಾರೆ ಅಂದರು. ಇವತ್ತು ಸಭೆಗೆ ನೀವು ಬರಲಿಲ್ಲ, ನಿಮ್ಮ ಆರೋಗ್ಯ ಹೇಗಿದೆಯೋ ಅಂತ ವಿಚಾರಿಸಲು ಬಂದೆ ಅಂದೆ.

ಆರೋಗ್ಯ ಚೆನ್ನಾಗೇ ಇದೆ, ಆದರೆ ಅಂತ ಸಭೆಯಲ್ಲಿ ಮಾತನಾಡುವ ಮೋರೇಲು (ನೈತಿಕತೆ) ಹೊರಟುಹೋಗಿದೆ ಅಂದರು.

ಯಾಕೆ ಸಾರ್ ಅಂದೆ.

ರಾಯರ ಮನೆಯ ಮಕ್ಕಳು ಎಲ್ಲಾ ಜವಾಬ್ದಾರಿ ಹೊತ್ತಿದ್ದರು. ಮನೆಯನ್ನು ಮುಂದೆ

ವಿಸ್ತರಣೆ ಮಾಡಿದಾಗ, ಮೇಲೆ ಮಹಡಿ ಕಟ್ಟಿದಾಗ ಎಲ್ಲಾ ಅವರೇ ನೋಡಿಕೊಂಡಿದ್ದರು. ಎರಡು ತಿಂಗಳ ಹಿಂದೆ ಮನೆ ಮೇಲೆ ಮತ್ತೆ ಒಂದು ರೂಮು ಹಾಕಬೇಕಿತ್ತು. ಇವರೇ ಜವಾಬ್ದಾರಿ ಹೊತ್ತರಂತೆ. ಮನೆ ಮುಂದೆ ಇಟ್ಟಿಗೆ ಬಂದು ಬೀಳುತ್ತಿದ್ದ ಹಾಗೆಯೇ ವಾಟರ್ ಸಪ್ಲೈನವರು ಬಂದರಂತೆ. ಕಟ್ಟಡ ನಿರ್ಮಾಣಕ್ಕೆ ನಾವು ನೀರು ಕೊಡುವ ರೂಲ್ಸು ಇಲ್ಲ, ಅದನ್ನ ಗೃಹೋಪಯೋಗಿ ಅಲ್ಲದ್ದು ಅಂತ ಬಿಲ್ ಮಾಡ್ತೀವಿ ಅಂದರು. ಸರಿ ಅಂತ ಇವರು ನೀವು ನೀರು ಸರಬರಾಜಿಗೆ ಪಡುತ್ತಿರೋ ಅವಸ್ಥೆ ನನಗೆ ಗೊತ್ತು, ಆದರಿಂದ ನಾನು ಖಾಸಗಿ ಅವರ ಹತ್ತಿರ ನೀರು ತರಿಸ್ಕೋತಾ ಇದೀನಿ ಅಂದರು. ಹಾಗಂತ ಒಂದು ಪತ್ರ ಕೊಡಿ ಅಂತಂದನಂತೆ. ಪಾಪ ಇವರು ಏಳು ಮೈಲಿ ದೂರದ ಆಫೀಸಿಗೆ ಹೋಗಿ ಪತ್ರವನ್ನೂ ಕೊಟ್ಟರು. ಆಮೇಲಿನ ಕತೆ ವಿಚಿತ್ರವಾಯಿತು. ಮನೇಲಿ ಭಾವಿ ಅಥವಾ ಸಂಪು ಇದ್ದರೆ ಮಾತ್ರ ನಾವು ಈ ಪತ್ರ ಪರಿಗಣಿಸಬಹುದು. ಇಲ್ಲವಾದಲ್ಲಿ ನಿಮಗೆ ನಾನ್ ಡೊಮೆಸ್ಟಿಕ್ ರೇಟು ಹಾಕಬೇಕಾಗುತ್ತೆ ಅಂತ ಹೇಳಿ ಹೋದರಂತೆ. ಇವರು ಮೇಲಿನ ಅಧಿಕಾರಿಗೆ ಪತ್ರ ಕೊಟ್ಟೀದೀನಿ ಅಂತ ಸುಮ್ಮನಿದ್ದರು. ಮಾರನೇ ತಿಂಗಳು ಬಿಲ್ ಬಂದರೆ ಎರಡೂ ಮುಕ್ಕಾಲು ಸಾವಿರಕ್ಕೆ ಬಿಲ್ ಬಂದಿದೆ - ಮಾಮೂಲಾಗಿ ಮುನ್ನೂರಕ್ಕೆ ಬರೋದು. ಸರಿ ಇವರಿಗೆ ತಾಕಲಾಟ ಶುರುವಾಯಿತು. ಬಿಲ್ ಹಾಕೋನ ಹತ್ತಿರ ಹೋದರು. ಆತ ನನಗೆ ಇಷ್ಟು ಕೊಡಿ, ನಿಮ್ಮ ಬಿಲ್ ಕಡಿಮೆ ಮಾಡ್ತೀನಿ ಅಂದ. ಇವರು ಅದನ್ನೂ ಮಾಡಿದರು. ಹೀಗೆ ಮಾಡಿದ ನಂತರ ಅವರ ಮನಸ್ಸಿನಲ್ಲಿ ಕೊರಗು ಶುರುವಾಯಿತು. ಸಭೆ ಸಮಾರಂಭಗಳಲ್ಲಿ ನಾವು ಲಂಚ ರುಷುವತ್ತು ಹೋಗಿಸಲು ನಾವು ಪ್ರಾಮಾಣಿಕರಾಗಿರಬೇಕು, ನಾವು ಸರಿಯಿದ್ದರೆ ವ್ಯವಸ್ಥೆ ಸರಿಯಿರುತ್ತೆ ಅಂತ ಇಷ್ಟು ವರ್ಷ ಹೇಳಿಕೊಂಡು ಬಂದೆ. ಮುಂದೆ ಯಾವ ಮುಖ ಇಟ್ಟುಕೊಂಡು ಮುಂದೆ ಈ ರೀತಿ ನಾನು ಹೇಳಲಿ? ವ್ಯವಸ್ಥೆಯನ್ನು ಸರಿಪಡಿಸಬೇಕಾದ ನನ್ನಂತಹವರೇ ಲಂಚ ಕೊಟ್ಟಮೇಲೆ ಮಿಕ್ಕವರಿಗೆ ಹೇಳೋದಿಕ್ಕೆ ನನಗೆ ಯಾವ ನೈತಿಕ ಪ್ರಜ್ಞೆ ಇದೆ ಹೇಳೀ ಇವರೇ.... ಅಂತ ಬಹಳ ಹೊತ್ತು ಅಲವತ್ತುಕೊಂಡರು.

ಅವರ ಪಾಡು ನೋಡಿ ಒಂದುಕಡೆ ಅಯ್ಯೋ ಅನಿಸಿದರೂ ಮತ್ತೊಂದು ಕಡೆ ಮನುಷ್ಯ ತುಂಬಾ ಸೆನ್ಸಿಟೀವ್ ಆಗಿಬಿಟ್ಟಿದ್ದಾರೆ ಅನಿಸಿತು.

ಸಾರ್, ಬನ್ನಿ ಯಾವುದಾದರೂ ಸರ್ಕಾರೀ ಕಚೇರಿಗೋ ಅಥವಾ ಕಾರ್ಪೊರೇಷನ್ ಆಫೀಸಿಗೋ ಹೋಗಿದ್ದು ಬರೋಣ, ನಿಮ್ಮ ಚಿಂತೆ ಹೋಗಬೇಕೂಂದರೆ ನೀವು ಹೊರಪ್ರಪಂಚದಲ್ಲಿ ಅದೇನು ಆಗ್ತಿದೆ, ಎಲ್ಲಿ ಯಾವ ಹೆಗ್ಗಣ ಹೇಗೆ ಎಷ್ಟು ಯಾರನ್ನು ಮುಕ್ಕುತ್ತಿದೆ ಅಂತ ನೋಡಬೇಕು - ದೇಶ ಸರಿಹೋಗಬೇಕು ಅಂತ ಪ್ರಯತ್ನ ಪಡೋಣ ಆದರೆ ಅದನ್ನೇ ತಲೆಗೆ ಹಚ್ಚಿಕೊಂಡು ಕೂತರೆ ನಾವು ಹುಚ್ಚರಾಗ್ತೀವಿ..... ಅವಾಗ ನಿಮಗೆ ಈ ನೈತಿಕತೆ ಪ್ರಶ್ನೆ ಎದುರು ಬೀಳೋಲ್ಲ.... ಅಂತ ಅವರನ್ನ ಸಮಾಧಾನ ಪಡಿಸಲು ಯತ್ನಿಸಿದೆ. ತಲೆ ಕೆಟ್ಟವರಿಗೆ ನೈತಿಕತೆಯ ಪ್ರಶ್ನೆ ಅಷ್ಟಾಗಿ ಕಾಡುವುದಿಲ್ಲ, ಅಂದರೆ ಸುಖವಾಗಿ ಜೀವನ ನೂಕಬೇಕು ಅಂದರೆ ನಾವು ತಲೆ ಕೆಡಿಸಿಕೊಳ್ಳಬೇಕು.....!

✵

ಬಂದೋಪಾಖ್ಯಾನ

- ಕುಬ್ಜ

ಈ ಬಂದ್‌ಗಳನ್ನು ಯಾಕೆ ಆಚರಿಸುತ್ತಾರೆ ಎಂದು ಹೆಂಡತಿ ಕೇಳಿದಳು

ಯಾಕಂದ್ರೆ? ಅವರು ತಮ್ಮ ಕೋಪ ತಾಪಗಳನ್ನು ಮತ್ತೆ ಹೇಗೆ ತೋರಿಸೋದು ಎಂದು ಗಂಡ ವಿವರಣೆ ಕೊಡಲು ಪ್ರಯತ್ನಿಸಿದ.

ಹಾಗಿದ್ದರೆ ಮೊನ್ನೆ ಭಾ.ಬ. ಆಯಿತಲ್ಲ

ಭಾ.ಬ....!

ಅದೇರೀ ಭಾರತ್ ಬಂದ್

ಸರಿ ಸರಿ ಮುಂದುವರಿಸು

ಭಾರತ್ ಬಂದ್ ಆದ ಮೇಲೆ ಪೆಟ್ರೋಲ್ ಬೆಲೆ ಇಳಿತೇನು?

ಇಲ್ಲ

ಹಾಗಿದ್ದ ಮೇಲೆ ಅದನ್ನು ಯಾಕೆ ಆಚರಿಸಬೇಕಿತ್ತು?

ಶ್ರೀಕೃಷ್ಣ ಹೇಳಿಲ್ಲವೇನು

ಶ್ರೀಕೃಷ್ಣನೋ ಎಸ್.ಎಂ. ಕೃಷ್ಣನೋ?

ಭಗವಾನ್ ಕೃಷ್ಣ

ಏನು ಹೇಳಿದಾನೆ?

ಕರ್ಮಣ್ಯೇವಾಧಿಕಾರಸ್ಥೇ etc. etc. ಅಂದ್ರೆ ನೀನು ನಿನ್ನ ಕರ್ಮ ಮಾಡು, ಫಲಾಫಲ ನಿರೀಕ್ಷಿಸಬೇಡ

ಅಂದ್ರೆ ನೀವು ಹೇಳೋದೇನು? ಬಂದ್ ಮಾಡು ಅಥವಾ ಬಂದ್ ಆಚರಿಸು, ಫಲ ನಿರೀಕ್ಷಿಸಬೇಡ ಅಂತ ತಾನೇ

ಖಂಡಿತ

ನನಗೇನೋ ಅದರಿಂದ ಉಪಯೋಗವಿಲ್ಲ ಎಂದೆನಿಸುತ್ತೆ

ಹೌದೇ? ಹಾಗಿದ್ದರೆ ಅವತ್ತು ನಾನು ನಿನಗೆ ಸಿಲ್ಕ್ ಸೀರೆ ಕೊಡಿಸೋಲ್ಲ ಅಂದೆ. ಅದಕ್ಕೆ ನೀನೇನು ಮಾಡಿದೆ? ಅಡಿಗೆ ಮನೇಲಿ ಪಾತ್ರೆ ಎಲ್ಲ ಕುಕ್ತಾ ಇದ್ದೆ. ಹಾಗೆ ಕುಕ್ಕಿದ್ದಕ್ಕೆ ಸೀರೆ ಸಿಕ್ತೇನು?

ರೀ ರೀ.......

ಅವತ್ತೊಂದು ದಿನ ಬಂಗಾರದ ಸರ ಬೇಡ ಅಂದಿದ್ದಕ್ಕೆ ಮುಖ ಗಡಿಗೆ ದಪ್ಪ ಮಾಡ್ಕೊಂಡು ಮೂರು ದಿನ ಓಡಾಡಿದೆಯಲ್ಲ, ನಾಲ್ಕನೇ ದಿನ ನಿನಗೆ ಸರ ಸಿಕ್ತೇನು?

ಅದಕ್ಕೂ ಇದಕ್ಕೂ ಏನು ಸಂಬಂಧ?

ಸಂಬಂಧ ಇದೆ ಮೇಡಂ. ಪಾತ್ರೆ ಕುಕ್ಕಿದ್ದು, ಗಡಿಗೆ ದಪ್ಪ ಮುಖ ಮಾಡಿದ್ದು ಇವೆಲ್ಲ ಬಂದ್‌ಗಳಂತೆ, ಕೋಪ ತೋರಿಸಬೇಕು, ಫಲ ನಿರೀಕ್ಷಿಸಬಾರದು ಅಷ್ಟೆ

ನಾಳೆ ಹಿತಕವರೆ ಹುಳಿ ಮಾಡೋಲ್ಲ ನೀವು ಬಂದ್ ಆಚರಿಸಿ ಎಂದು ಹೆಂಡತಿ ಬಂದ್‌ಗೆ ನೋಟೀಸ್ ನೀಡಿದಳು.

❋

ಮೊಮ್ಮಗ ಮುಂದಿಟ್ಟ ಸಮಸ್ಯೆ

- ರಾಮಿ

ಸಾಯಂಕಾಲದ ವಾಕ್ ಮುಗಿಸಿಕೊಂಡು ಮನೆಯ ಗೇಟಿನೊಳಗೆ ಕಾಲಿಡುತ್ತಿದ್ದಂತೆ ಮನೆಯಲ್ಲಿ ಯಾರೋ ಬಿಕ್ಕಿ ಬಿಕ್ಕಿ ಅಳುವ ಸದ್ದು ಕೇಳಿಸಿತು. ನೋಡಿದರೆ ಮೊಮ್ಮಗರಾಯ. ಅಪ್ಪು ಕಣ್ಣು ತಿಕ್ಕುತ್ತಾ ಬಾಯಗಲ್ಸಿ ರೋದಿಸುತ್ತಿದ್ದಾನೆ. ತಾತನನ್ನು ಕಂಡು ಅವನ ಅಳು ಮತ್ತಷ್ಟು ಜೋರಾಯಿತು. ಸಮೀಪಕ್ಕೆ ಬಂದವನ ತಲೆ ಸವರುತ್ತಾ ಸಂತೈಸಿ 'ಏನಾಯಿತೋ ಮರಿ' ಅಂತ ಪದೇ ಪದೇ ಕೇಳಿದರೆ ಉತ್ತರ ಅಳು ಮಾತ್ರ. 'ಗಾಯಿತ್ರಿ, ಏನಾಯಿತೇ ಇವನಿಗೆ' ಅಂತ ಕೇಳಿದರೆ ಒಳಗಿನಿಂದಲೂ ಉತ್ತರವಿಲ್ಲ. ಸ್ವಲ್ಪ ತಡೆದು 'ಅಮ್ಮ ಇಲ್ಲ ಪೇಟೆಗೆ ಹೋಗಿದಾಳೆ' ಎಂಬ ಮಾಹಿತಿ ಬಂತು ಅಪ್ಪುವಿನಿಂದ. 'ನೀನು ಅಳುತ್ತಿರೋದು ಯಾಕೆ? ಅಮ್ಮ ಪೆಟ್ಟು ಕೊಟ್ಟಳಾ' ಅಂತ ಕೇಳಿದ್ದಕ್ಕೆ ಹೂಂ ಅಂತ ಉತ್ತರ ಬಂತು. 'ನೀನೇನು ಮಾಡಿದೆ' ಅಂತ ಕೇಳಿದೆ. 'ಏನೂ ಮಾಡಿಲ್ಲ ಒಂದಷ್ಟು ಕಾಗದ ಚೂರು ಚೂರು ಮಾಡಿ ಮೇಲಕ್ಕೆ ಹಾರಿಸಿದೆ. ಚೆಂದ ಕಂಡಿತು. ಅಷ್ಟಕ್ಕೇನೇ ಮನೆಯೆಲ್ಲ ಕಸ ಆಯಿತು ಅಂತ ಅಮ್ಮ ಬಾರಿಸಿದಳು' ಅಂತ ಮತ್ತೆ ಅಳೋದಕ್ಕೆ ಷುರು ಮಾಡಿದ. 'ಹಾಗೆಲ್ಲ ಕಸ ಚೆಲ್ಲಾಬಾರದು ಮಗು' ಅಂದೆ. 'ಟಿ.ವಿ. ನ್ಯೂಸ್‌ನಲ್ಲಿ ರಾಶಿ ರಾಶಿ ಕಾಗದ ಹರಿದು ಮೇಲಕ್ಕೆ ಹಾರಿಸಿದ್ದನ್ನು ಕಂಡೆ. ಚೆನ್ನಾಗಿತ್ತು, ನನಗೂ ಹಾಗೇ ಮಾಡೋಣ ಎನಿಸಿತು. ಹಳೇ ಹಾಳೆಗಳನ್ನು ಹರಿದು ಹಾರಿಸಿದೆ. ಅಷ್ಟಕ್ಕೇನೇ ಅಮ್ಮ ರೇಗಿಬಿಟ್ಟಳು' ಅಂದ. ಮೊಮ್ಮಗನ ಕಸ ಮಾಹಿತಿ ತಾತನನ್ನು ಆಲೋಚನೆಗೆ ಹಚ್ಚಿತು. ಆ ದೃಶ್ಯವನ್ನು ಅವರು ಕೂಡಾ ಟಿ.ವಿ. ವಾರ್ತೆಯಲ್ಲಿ ಹಲವು ಸಲ ನೋಡಿ ತಲೆ ಚಚ್ಚಿಕೊಂಡಿದ್ದರು. 'ಅವರು ಮಾಡಿದರೆ ಮಾಡಿಕೊಳ್ಳಲಿ ನಾವು ಹಾಗೆಲ್ಲ ಮಾಡಬಾರದು' ಎಂದು ತಲೆ ಸವರಿ ಬೆನ್ನು ತಟ್ಟುವಷ್ಟರಲ್ಲಿ ಗಾಯಿತ್ರಿ ಒಳಗೆ ಕಾಲಿಡುತ್ತಾ 'ಆಗಲೇ ದೂರು ಕೊಟ್ಟಾಯಿತಾ' ಎಂದು ವಿಚಾರಿಸುತ್ತಾ. 'ಹಾಗೆಲ್ಲ ಮಾಡಬಾರದೆಂದು ಗದರಿದರೆ – ಅವರು ಮಾಡಬಹುದು, ನಾನು ಮಾತ್ರ ಮಾಡಬಾರದಾ ಅಂತ ಸವಾಲು ಹಾಕ್ತಾನೆ' ಎನ್ನುತ್ತಾ ಮಗನಿಗೆ ತಾನು ತಂದಿದ್ದ ಚಾಕೋಲೇಟುಗಳನ್ನು ದಾಟಿಸಿದಳು. ಅವನಿಗೆ ತೃಪ್ತಿಯಾಯಿತು ಅಂತ ಬೇರೆ ಹೇಳಬೇಕಾಗಿಲ್ಲ. ಸೊಸೆ ಒಳಗೆ ಹೋಗೋ ಮೊದಲು 'ಅವರು ಅಸೆಂಬ್ಲೀಲಿ ಕೈಗಿತ್ತ ಕಡತಗಳನ್ನು ಚೂರು ಚೂರು ಮಾಡಿ ರಂಪ ಎಬ್ಬಿಸಿದರು ಅಂತ ಇವನೂ ಪೇಪರ್‌ಗಳನ್ನೆಲ್ಲ ಚೂರು ಚೂರು ಮಾಡಿ ಮನೆ ತುಂಬಾ ಎಸೆದ ' ಅಂತ ಹೇಳಿ ಗಾಯಿತ್ರಿ ಒಳಗೆ ನಡೆದಳು. ತಾತನೂ ಮತ್ತೊಮ್ಮೆ ಅಪ್ಪುವಿನ ತಲೆ ಸವರಿ ಹಾಗೆಲ್ಲ ಮಾಡಬಾರದು ಮಗೂ ಎಂದು ತಾಕೀತು ಮಾಡಿ ಆಚೆಗೆ ಸರಿದರು. ಅಪ್ಪುವನ್ನು ಚಾಕೋಲೇಟು ಕೊಟ್ಟು ತಣಿಸಬಹುದು ಆದರೆ ಅಸೆಂಬ್ಲಿಯವರನ್ನು ಹೇಗೆ ತಣಿಸಬಹುದು ಎಂದು ತಾತ ತಲೆಕೆರೆದುಕೊಂಡು ಇದು ಇಡೀ ದೇಶದ ಸಮಸ್ಯೆ ಎಂದು ತಮ್ಮಷ್ಟಕ್ಕೆ ತಾವು ಗೊಣಗಿಕೊಂಡು ಎದ್ದರು.

आ नो भद्रा: क्रतवो यन्तु विश्वत: ।

"Let Noble Thoughts Come To Us From Every Side"

Not for nothing are we considered

"One of the most preferred B-Schools..." !

Our enviable reputation as "One of the most preferred B-School in Bangalore", the Silicon Valley of India, has been a result of our strategic approach in imparting Management Studies. The distinct difference lies in our emphasis on the holistic development of the students while preparing them as Managers of tomorrow upholding Bharatiya Vidya Bhavan's values.

Two-year Full-Time Master of Business Administration (MBA) Course

Our student-centric facilities include:

Aesthetically designed Classrooms with LCD & NET

Highly qualified Faculty with Doctorate & Industry experience



- *Corporate ambience*
- *24-hours broadband Internet facility*
- *Extensive orientation programme*
- *Communication Skills*
- *Holistic approach through Yoga & Meditation*

M. P. BIRLA INSTITUTE OF MANAGEMENT

Associate Bharatiya Vidya Bhavan

Approved by AICTE and Affiliated to Bangalore University

#43, Race Course Road, Bangalore - 560 001 Karnataka

•Ph: 080-2235 4725, 2238 2798, 2238 9634, 2220 7742 •Fax: 080-2238 9635

•E-mail: admissions@mpbim.com •Web: **www.mpbim.com**

We are a BHAVAN'S INSTITUTE

Are you ready for the challenge?

We won't just give you grades
We make you earn

We don't just transfer knowledge
We make you yearn



We won't just teach you
We make you learn

We don't just recommend you for a career
We make you deserve it

We are a BHAVAN'S INSTITUTE

आ नो भद्रा: क्रतवो यन्तु विश्वत: ।

"Let Noble Thoughts Come To Us From Every Side"

Bhavan - Marshall MBA Program

•Courses taught by Doctorally qualified Professors mainly from Marshall University with current publications in refereed journals •Two-year full time MBA course •**MBA Degree awarded by Marshall University** •Option of attending Marshall University's campus in the USA

Bharatiya Vidya Bhavan

offers an INTERNATIONAL MBA from

MARSHALL UNIVERSITY, USA

at its Campus #43, Race Course Road, Bangalore - 560 001 Karnataka

•Ph: 080-2237 0445 / 46 •Fax: 080-2237 0447 •E-mail: mba2@bhavan-marshall.org

•Web: **www.bhavan-marshall.org**, •Web: **www.marshall.edu**

Mailing Date
5th of every month
Mailed at: MBC Bangalore GPO

CPMG/KA/BGW-544/2009-2011
RNI-KAR-KAN / 2005/ 15457

MALLIGE

PERSONALISED COMPLETE MEDICAL CARE



Mallige Medical Centre

31/32, Crescent Road,
Bangalore – 560001
Phone: 22203333, Fax: 22265298
E-mail: info@mallige.com

Mahabodhi Mallige Hospital

T. Mariappa Road, 1st Block, Jayanagar,
Bangalore – 560011
Phone: 26565678, Fax: 26571516
Web: http://www.mallige.com

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 58/2, 2nd Main Road, Industrial Town, Rajajinagar, Bangalore - 560 010. PH : 4088 9999
Editor: M. SHIVAKUMAR